
ಪ್ರಕಟಣೆ-59

ದೊಡ್ಡರೋಗ

(ರಿಂಡರ್ ಪೆಸ್ಟ್)

ಡಾ॥ಎಂ.ಸತ್ಯನಾರಾಯಣರಾವ್



ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು-24

ಪ್ರಕಟಣೆ 59

ದೊಡ್ಡರೋಗ

(ರಿಂಡರ್‌ಪೆಸ್ಟ್)

ಡಾ|| ಎಂ. ಸತ್ಯನಾರಾಯಣರಾವ್

1977

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ದೊಡ್ಡರೋಗ (ರಿಂಡರ್‌ಪೆಸ್ಟ್) (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1977, 1000 ಪ್ರತಿಗಳು ಪುಟ xii+45+v ಬೆಲೆ: ರೂ. 5-00

ಪ್ರಧಾನ ಸಂಪಾದನೆ
ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ
ಡಾ|| ಪಿ. ಎಸ್. ಕಮಲಾಪುರ್
ಪಶುವೈದ್ಯಕೀಯ ಕಾಲೇಜು
ಬೆಂಗಳೂರು

ಕಲೆ
ಚಂದ್ರಪಾಲ್‌ಸಿಂಗ್
ಬಿ. ಎಂ. ವೆಂಕಟೇಶ್

ಮುದ್ರಣ
ವೀರಭದ್ರ ಪ್ರಿಂಟರ್ಸ್
ನಂ. 8, 5ನೇ ಮುಖ್ಯರಸ್ತೆ, ಕೆ. ಪಿ. ಅಗ್ರಹಾರ,
ಬೆಂಗಳೂರು–560023.

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾ ಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತವೆ. ಈ ಕಾರ್ಯಸಾಧನೆಯಲ್ಲಿ ಕೃಷಿವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೆ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದು ಬರುತ್ತದೆ. ಈ ಭಾಷೆಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿ ಶಿಕ್ಷಣಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟುದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕ ನಡೆಯಿಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಮುಕ್ಕಾಲುಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ದಿನಾಂಕ: 15-9-1977

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಕೃಷಿ ವಿಜ್ಞಾನಗಳಲ್ಲಿ ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಶಾಸ್ತ್ರಗಳು ಪ್ರಮುಖ ಸ್ಥಾನ ಪಡೆದಿವೆ. ಪಶುಗಳ ಅಭಿವೃದ್ಧಿಗೆ ಉಚಿತ ಸಂಗೋಪನೆ ಹಾಗೂ ರೋಗರುಜಿನಗಳಿಂದ ಪರಿಹಾರ ಪಡೆಯುವಿಕೆ ಮಹತ್ವದ ಅಂಶಗಳಾಗಿವೆ. ದನಗಳಿಗೆ ಬರುವ ಹಲವಾರು ರೋಗಗಳಲ್ಲಿ ದೊಡ್ಡರೋಗ ಒಂದು ಭಾರಿ ಪಿಡುಗು. ಅದು ಬರದಂತೆ ನೋಡಿಕೊಳ್ಳುವಿಕೆ ಹಾಗೂ ನಿವಾರಣೆಗೋಸುಗ ಹಲವಾರು ಯತ್ನಗಳು ಇತ್ತೀಚೆಗೆ ಕಟ್ಟುನಿಟ್ಟಾಗಿ ಬಳಕೆಯಲ್ಲಿವೆ. ಈ ರೋಗದ ಪರಿಚಯ, ಹುಟ್ಟು, ಪ್ರಸಾರ ನಿದಾನ, ಚಿಕಿತ್ಸೆ, ನಿಯಂತ್ರಣ ಈ ಹಲವು ವಿಷಯಗಳ ಬಗೆಗೆ ಸ್ವಲ್ಪದರಲ್ಲಿಯೇ ತಿಳಿವಳಿಕೆ ನೀಡುವ ಚಿಕ್ಕ ಹೊತ್ತಗೆ ಇದು. ಪಶುವೈದ್ಯಕೀಯ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ॥ ಎಂ. ಸತ್ಯನಾರಾಯಣರಾವ್ ಇದರ ಕರ್ತೃಗಳು. ಅದೇ ಕಾಲೇಜಿನಲ್ಲಿ ಪಶುವೈದ್ಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ॥ ಪಿ. ಎನ್. ಕಮಲಾಪುರ್ ಅವರು ಈ ಪುಸ್ತಕದ ತಾಂತ್ರಿಕ ಪರಿಶೀಲನೆ ಮಾಡಿದ್ದಾರೆ. ಅಚ್ಚಿಗೆ ಸಿದ್ಧಪಡಿಸುವಿಕೆ ಹಾಗೂ ಕರಡೋದುವಿಕೆಗಳಲ್ಲಿ ನಮ್ಮ ವಿಭಾಗದಲ್ಲಿ ಸಂಶೋಧನ ಸಹಾಯಕರಾಗಿರುವ ಶ್ರೀಮತಿ ಉಷಾಕಿರಣ್ ಅವರು ಹಾಗೂ ಸ್ವಚ್ಛಪ್ರತಿಯನ್ನು ಸಿದ್ಧಪಡಿಸುವಲ್ಲಿ ಶ್ರೀಮತಿ ರಂಗಮಣಿ ಅವರು ನೆರವಾಗಿದ್ದಾರೆ. ಇವರೆಲ್ಲರಿಗೂ ಆತ್ಮೀಯ ಕೃತಜ್ಞತೆಗಳು.

ಈ ಪುಸ್ತಕವು ಪಶುವೈದ್ಯಕೀಯ ವಿಜ್ಞಾನದ ಬೋಧಕರು, ವಿದ್ಯಾರ್ಥಿಗಳು, ರಾಜ್ಯಸರ್ಕಾರದ ಪಶುಸಂಗೋಪನ ಹಾಗೂ ಪಶುವೈದ್ಯಕೀಯ ಇಲಾಖೆಯ ಸಿಬ್ಬಂದಿಗಳು, ಹೈನುಗಾರರು, ಪಶುಸಂಗೋಪಕರು ಮತ್ತು ರೈತರಿಗೆ ಉಪಯುಕ್ತವಾಗಿದೆ. ಅವರೆಲ್ಲ ಇದರ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ.

ಭಾದ್ರಪದಮಾಸ ಪೈಂಗಳನಾಮ ಸಂವತ್ಸರ	**ವೀ.ಚ. ಹಿತ್ತಲಮನಿ**
ಶಾಲಿವಾಹನಶಕ, 1889	ಕನ್ನಡ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ	ಹಾಗೂ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–560024	ಕ. ಅ. ಸ. ಕಾರ್ಯದರ್ಶಿಗಳು

ಲೇಖಕರ ಮಾತು

ವಿಶ್ವದಾದ್ಯಂತ ಅಸಂಖ್ಯಾತ ಪ್ರಾಣಿಗಳನ್ನು ಕಾಡಿಸಿ, ಪೀಡಿಸಿ, ಸಾಯಿಸಿ, ದೊಡ್ಡ ಗದ್ದಲವೆಬ್ಬಿಸಿ, ಸಾಮಾನ್ಯ ರೈತನಿಂದ ಹಿಡಿದು ಮಹಾ ವಿಜ್ಞಾನಿಯವರೆಗೆ ಎಲ್ಲರ ಗಮನವನ್ನು ತನ್ನ ಕಡೆಗೆ ಸೆಳೆದ ಪ್ರಾಣಿಗಳ ಮಹಾಮಾರಿ ದೊಡ್ಡರೋಗ. ಇದರ ನಿವಾರಣೆಗಾಗಿ ಸರ್ಕಾರ ಹಾಗೂ ಸಂಬಂಧಪಟ್ಟವರು ಪಟ್ಟಪಾಡು ಅಷ್ಟಿಷ್ಟಲ್ಲ; ಸುರಿದ ಹಣಕ್ಕೆ ಲೆಖ್ಖವಿಲ್ಲ. ಆದರೂ, ಇದು ಇಂದೂ ದೊಡ್ಡರೋಗವೇ! ಇದರ ಸಂಪೂರ್ಣ ನಿವಾರಣೆಗೆ ಸರ್ಕಾರ ತನ್ನ ಕಾರ್ಯ ತಾನು ಮಾಡುತ್ತಿದೆ.

ವಿಜ್ಞಾನಿಗಳು, ತಾಂತ್ರಿಕಜ್ಞರು, ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ರೈತಾಪಿ ವರ್ಗದವರಿಗೆ ಅನುಕೂಲವಾಗುವಂತೆ ರಚಿಸಿರುವ ಕೃತಿ ಇದು.

ಕನ್ನಡ ಪ್ರಾಧ್ಯಾಪಕರಾದ ಪ್ರೊ|| ಹಿತ್ತಲಮನಿಯವರ ಸಾನ್ನಿಧ್ಯದಲ್ಲಿ ಪಶು ವೈದ್ಯಕೀಯ ಸೂಕ್ಷ್ಮಾಣು ಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ|| ಬಿ. ಎಸ್. ಕೇಶವಮೂರ್ತಿಯವರ ಪ್ರೋತ್ಸಾಹ ಹಾಗೂ ಪ್ರಾಣಿ ಆರೋಗ್ಯ ಮತ್ತು ಪಶುರೋಗ ನಿರೋಧಕ ಜೀವವಸ್ತು ತಯಾರಿಕಾ ಕೇಂದ್ರ(ಬೆಂಗಳೂರು)ದ ನಿರ್ದೇಶಕರಾದ ಡಾ|| ಆರ್. ಡಿ. ನಂಜುಂಡಯ್ಯನವರ ಆಶೀರ್ವಾದದಿಂದ ಮೂಡಿ ಬಂದ ಕೃತಿ ಇದು. ಇವರೆಲ್ಲರಿಗೂ ನಾನು ಅನವರತ ಆಭಾರಿ.

ಚಿತ್ರಗಳನ್ನು ಒದಗಿಸಿದ ಕರ್ನಾಟಕ ರಿಡ್‌ಡೇನ್ ಯೋಜನೆಯ ನಿರ್ದೇಶಕರಾದ ಡಾ|| ಎಂ. ನಾರಾಯಣಸ್ವಾಮಿಯವರಿಗೂ, ಡಾ|| ಕೆ. ಚಂದ್ರಪಾಲ್‌ಸಿಂಗ್ ಅವರಿಗೂ ನನ್ನ ನೆನಕೆಗಳು.

ಬೆಂಗಳೂರು.
ದಿ|| 1-9-77

ಡಾ|| ಎಂ. ಸತ್ಯನಾರಾಯಣರಾವ್

ಪರಿವಿಡಿ

	ಕುಲಪತಿಗಳ ಹಾರೈಕೆ	iii
	ಸಂಪಾದಕರ ಮಾತು	v
	ಲೇಖಕರಮಾತು	vii
	ಪರಿವಿಡಿ	ix
	ಚಿತ್ರಗಳಪಟ್ಟಿ	x
1.	ರೋಗ ಪರಿಚಯ	1
2.	ರೋಗಗ್ರಾಹಕ ಪ್ರಾಣಿಗಳು ಹಾಗೂ ರೋಗಕಾರಕಗಳು	3
3.	ರೋಗ ಪ್ರಸಾರ	4
4.	ರೋಗೋತ್ಪತ್ತಿ	7
5.	ರೋಗ ಲಕ್ಷಣಗಳು	8
6.	ರೋಗ ವಿಕೃತಿಗಳು	13
7.	ರೋಗ ನಿದಾನ	17
8.	ವಿಭೇದಾತ್ಮಕ ರೋಗನಿದಾನ	21
9.	ಚಿಕಿತ್ಸೆ	24
10.	ರೋಗನಿಯಂತ್ರಣ	25
11.	ಕರ್ನಾಟಕದಲ್ಲಿ ದೊಡ್ಡರೋಗ ನಿವಾರಣಾಯೋಜನೆ	34
	ಪಾರಿಭಾಷಿಕ ಶಬ್ದಕೋಶ	
	ಆಧಾರ ಗ್ರಂಥಗಳು	

ಚಿತ್ರಗಳ ಪಟ್ಟಿ

ಚಿತ್ರ-1.	ರೋಗಪೀಡಿತ ಪ್ರಾಣಿಯ ಬಾಯಿಂದ ಜೊಲ್ಲು ಸುರಿಯುತ್ತಿರುವಿಕೆ.	8
ಚಿತ್ರ-2.	ರೋಗಪೀಡಿತ ಎತ್ತಿನ ಕಣ್ಣಿನಿಂದ ನೀರು ಸುರಿಯುತ್ತಿರುವಿಕೆ.	9
ಚಿತ್ರ-3.	ಬಿರುಸಿನ ಭೇದಿ ಲಕ್ಷಣ ತೋರುತ್ತಿರುವ ರೋಗ ಪೀಡಿತ ಪ್ರಾಣಿ.	10
ಚಿತ್ರ-4.	ರೋಗಪೀಡಿತ ಪ್ರಾಣಿಯ ಒಸಡುಗಳ ಒಳಭಾಗದಲ್ಲಿ ವ್ರಣ ಹಾಗೂ ಹೊಟ್ಟು ಎರಚಿದಂತೆ ಕಾಣುತ್ತಿರುವಿಕೆ.	11
ಚಿತ್ರ-5.	ರೋಗಪೀಡಿತ ಸತ್ತಪ್ರಾಣಿಯ ಶವಪರೀಕ್ಷೆ. ನಿಜ ಜಠರದಲ್ಲಿ ವ್ರಣಗಳು ಹಾಗೂ ರಕ್ತ ಒಸರುವಿಕೆ.	14
ಚಿತ್ರ-6.	ಜೀಬ್ರಾಗುರುತುಗಳನ್ನು ತೋರಿಸುತ್ತಿರುವ ರೋಗಗ್ರಸ್ತ ಪಶುವಿನ ಕರುಳಿನ ಭಾಗಗಳು.	15

ದೊಡ್ಡರೋಗ

(ರಿಂಡರ್‌ಪೆಸ್ಟ್)

1. ರೋಗ ಪರಿಚಯ

ದೊಡ್ಡರೋಗವು ಪ್ರಮುಖವಾಗಿ ಮೆಲುಕು ಪ್ರಾಣಿಗಳ ತೀವ್ರರೂಪದ, ಒಂದು ಅತಿ ಸಾಂಸರ್ಗಿಕರೋಗ. ಈ ರೋಗದ ವಿಶಿಷ್ಟ ಲಕ್ಷಣಗಳು ಜ್ವರ, ಜೀರ್ಣನಾಳಾದ್ಯಂತ ಲೋಳ್ಪರೆಗೆ ಸೀಮಿತವಾಗಿರುವ, ಬಿಂದು ರೂಪದ ಸನೆತ ಹಾಗೂ ಪರಿಗಲಿತ (ಮೃತಾಂಗಾಂಶ) ರೋಗವಿಕ್ಷತಿ (ಗಾಯ)ಗಳು, ಬೇಧಿ ಮತ್ತು ಹಾಲ್ರಸಕಣ ಬಹುಳತೆ. ದೊಡ್ಡರೋಗಕ್ಕೆ ಕಾರಣ ವಿಷಾಣು.

ದೊಡ್ಡರೋಗವು ಪುರಾತನ ಕಾಲದಿಂದಲೂ ಪ್ರಾಣಿಸಮುದಾಯದಲ್ಲಿ ಹಾನಿಗೆ ಕಾರಣವಾಗಿರುವ ಒಂದು ಪ್ರಮುಖರೋಗ. ಪ್ರಪಂಚದಲ್ಲೇ ಪಶುವೈದ್ಯಕೀಯ ರಂಗದಲ್ಲಿ ಕ್ರಾಂತಿಯೆಬ್ಬಿಸಿದ ರೋಗವಿದು. ಬಹಳ ಹಿಂದಿನಿಂದಲೂ ರೈತರಿಗೆ ತಮ್ಮ ಪ್ರಾಣಿಗಳಿಗೆ ಮಾರಕವಾಗಿರುವ ದೊಡ್ಡರೋಗದ ಪರಿಚಯವಿದೆ. ಇದೊಂದು ಅತಿ ಸಾಂಕ್ರಾಮಿಕ ರೋಗವಾದುದರ ಪರಿಣಾಮವಾಗಿ ರೈತರಿಗೆ ಸಂಭವಿಸುತ್ತಿದ್ದ ನಷ್ಟ ಅಪಾರ. ದೊಡ್ಡರೋಗದ ವರ್ಣನೆ ನಾಲ್ಕನೆಯ ಶತಮಾನದಲ್ಲಿಯೇ ದೊರೆಯುತ್ತದೆ. ಈ ರೋಗವು ಪ್ರಥಮಬಾರಿಗೆ ಕ್ರಿ.ಶ. 376-386ರಲ್ಲಿ ಕಾಣಿಸಿಕೊಂಡ ಉಲ್ಲೇಖವಿದೆ. ಸೆವರಸ್ ಸ್ಯಾಂಕ್ಟಸ್‌ನ 'ದಿ ಕ್ರಾನಿಕಲ್ ಆಫ್ ಕಾರ್ಡಿನಲ್ ಬೆರೋಸಿಯಸ್' ಎಂಬ ಕೃತಿ ಪ್ರಾಣಿಗಳ ದೊಡ್ಡರೋಗದ ಬಗೆಗೆ ಸೂಚನೆ ನೀಡುವ ಅತ್ಯಮೂಲ್ಯ ಗ್ರಂಥ. ಈ ರೋಗವನ್ನು ಗುರುತಿಸಿದಂದಿನಿಂದ ಇತ್ತೀಚಿನವರೆಗೆ ಪ್ರಪಂಚದ ವಿವಿಧ ದೇಶಗಳಲ್ಲಿಯೂ ಅನೇಕ ರೋಗೋದ್ರೇಕಗಳ ಹಾಗೂ ಸಾವು, ನಷ್ಟಗಳ ವರದಿಗಳಾಗಿವೆ. ಪ್ರಾಚೀನ ಕಾಲದಲ್ಲಿ ಎಲ್ಲ ರೋಗೋದ್ರೇಕಗಳಿಗೂ ಪರಕೀಯರ ದಾಳಿ ಹಾಗೂ ಯುದ್ಧಗಳೇ ಮುಖ್ಯ ಕಾರಣಗಳಾಗಿದ್ದವು. ಪ್ರತಿಯೊಂದು ಪ್ರಮುಖ ಮಿಲಿಟರಿ ನೆಲೆಗಳಲ್ಲಿಯೂ ಯುದ್ಧಾನಂತರ ಅಲ್ಲಿನ ದನಗಳಲ್ಲಿ ದೊಡ್ಡರೋಗದ ಉದ್ರೇಕಗಳು ಸರ್ವಸಾಮಾನ್ಯವಾಗಿ ತಲೆದೋರುತ್ತಿದ್ದವು. ಇತ್ತೀಚಿನ ರೋಗೋದ್ರೇಕಗಳಿಗೆಲ್ಲ ವಾಯು, ನೌಕೆ, ರೈಲು ಮತ್ತು ರಸ್ತೆಗಳ ಅಭಿವೃದ್ಧಿಯೂ, ಆ ಮಾರ್ಗಗಳಿಂದ ಪ್ರಾಣಿಗಳು ಮತ್ತು ಅವುಗಳ ಪದಾರ್ಥಗಳ ಸಾಗಾಟವೂ, ಅಂತರ ರಾಷ್ಟ್ರೀಯ ಆಮದು ರಫ್ತಿನ ವ್ಯವಹಾರಗಳೂ ಮುಖ್ಯ ಕಾರಣಗಳಾಗಿರುತ್ತವೆ.

ದೊಡ್ಡರೋಗವು ಪ್ರಪಂಚದಾದ್ಯಂತ ಕಂಡುಬರುವುದಾದರೂ, ಕೆಲವು ದೇಶಗಳು ಸೂಕ್ತಕ್ರಮಗಳ ಪಾಲನೆಯಿಂದ ಇಂದು ಈ ರೋಗದಿಂದ ವಿಮುಕ್ತಗೊಂಡಿವೆ. ಅಮೆರಿಕ, ಕೆನಡ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಪಶ್ಚಿಮ ಯೂರೋಪ್

ದೇಶಗಳು ಬಹಳ ಹಿಂದೆಯೇ ದೊಡ್ಡರೋಗದಿಂದ ವಿಮುಕ್ತಿ ಪಡೆದವು. ಏಷ್ಯಾ ಮತ್ತು ಆಫ್ರಿಕಾಗಳ ಕೆಲವೆಡೆ ಇದು ಪ್ರಾಣಿಸ್ಥಾನಿಕ ವ್ಯಾಧಿಯಾಗಿ ಗೋಚರವಾಗಿದೆ.

ಭಾರತದಲ್ಲಿ ಅನೇಕ ಶತಮಾನಗಳಿಂದಲೂ ದೊಡ್ಡರೋಗವು ಪ್ರಚಲಿತದಲ್ಲಿದೆ. ದೊಡ್ಡರೋಗದ ನಿವಾರಣೆಗೆಂದು ಪ್ರಪ್ರಥಮವಾಗಿ ಕ್ರಿ.ಶ. 1880ರಲ್ಲಿ 'ಕ್ಯಾಟಲ್ ಪ್ಲೇಗ್ ಕಮಿಷನ್' ರೋಗದಿಂದ ಉಂಟಾಗುತ್ತಿರುವ ಸಾವುನೋವುಗಳ ಅಧ್ಯಯನ ಮಾಡಿತು. ಅದರ ಪರಿಣಾಮವಾಗಿ ಕ್ರಿ.ಶ. 1889ರಲ್ಲಿ ಇಂಪೀರಿಯಲ್ ಬ್ಯಾಕ್ಟೀರಿಯಾಲಾಜಿಕಲ್ ಲ್ಯಾಬೊರೇಟರಿಯು ಸ್ಥಾಪನೆಯಾಯಿತು. ಅದೇ ಇಂದು ಮುಕ್ತೇಶ್ವರದಲ್ಲಿ ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯಾಗಿ ಪ್ರಸಿದ್ಧಿ ಪಡೆದಿದೆ. ಇದೇ ರೀತಿ ಅನೇಕ ದೇಶಗಳಲ್ಲಿ ಪಶುವೈದ್ಯಕೀಯ ಸಂಸ್ಥೆಗಳ ಉಗಮಕ್ಕೆ ದೊಡ್ಡರೋಗವೇ ಮುಖ್ಯ ಕಾರಣವಾಗಿರುತ್ತದೆ.

ದೊಡ್ಡರೋಗವು ಸಾಂಕ್ರಾಮಿಕ(ವ್ಯಾಪಕ)ರೂಪದಲ್ಲಿ ರೋಗಗ್ರಾಹಕ ಪ್ರಾಣಿ ಸಮುದಾಯದಲ್ಲಿ ಕಾಣಿಸಿಕೊಂಡಾಗ ಅವುಗಳಲ್ಲಿ ಅಧಿಕ ರೋಗವ್ಯಾಪನೆ ಕಂಡುಬರುವುದಲ್ಲದೆ ಸಾವಿನ ಗತಿಯೂ ಸಾಕಷ್ಟು ಪ್ರಮಾಣದಲ್ಲಿರುತ್ತದೆ.

ಸ್ಥಾನಿಕರೂಪದಲ್ಲಿ ದೊಡ್ಡರೋಗವು ಕಾಣಿಸಿದಾಗ ಸ್ಥಳೀಯ ಪ್ರಾಣಿಗಳು ಸ್ವಲ್ಪ ಮಟ್ಟಿಗೆ ರೋಗಪ್ರತಿರಕ್ಷತೆಯನ್ನು ಹೊಂದಿರುತ್ತವೆ. ಆದ್ದರಿಂದ ಅಲ್ಲಿ ಪ್ರಮುಖ ರೋಗೋದ್ರೇಕಗಳು ವಿರಳವಾಗಿದ್ದು, ಅನುತೀವ್ರ ರೋಗಸ್ಥಿತಿಗಳು ಸಾಮಾನ್ಯವಾಗಿರುತ್ತವೆ.

ಸೋಂಕು ಪ್ರದೇಶಗಳಿಂದ ಅಧಿಕ ರೋಗಗ್ರಾಹಕ ಪ್ರಾಣಿಗಳಿರುವ ಪ್ರದೇಶಗಳಿಗೆ ರೋಗ ಪ್ರಸಾರವಾದಾಗ ರೋಗವ್ಯಾಪನೆಯ ದರವು ಶೇಕಡಾ 100ರಷ್ಟು ಇದ್ದು, ಸಾವಿನ ದರ ಶೇಕಡಾ 50ರವರೆಗೂ ಇರುತ್ತವೆ.

ಭಾರತದಲ್ಲಿ 1956ರಿಂದ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ 8,000 ರೋಗೋದ್ರೇಕಗಳು ಕಾಣಿಸಿಕೊಂಡು ಸುಮಾರು 200,000 ದನ ಮತ್ತು ಎಮ್ಮೆಗಳ ಸಾವು ಸಂಭವಿಸಿತಲ್ಲದೆ, ಬಹುಶಃ ಅಷ್ಟೇ ಸಂಖ್ಯೆಯ ಪ್ರಾಣಿಗಳು ನಿಷ್ಫಲವಾದವಲ್ಲದೆ ಬೆಳವಣಿಗೆ ಕುಂಠಿತವಾಗಿಯೇ ಉಳಿದವು.

ಅಮೆರಿಕದಲ್ಲಿ ಕ್ರಿ. ಶ. 1949ರ ವರೆಗೆ ಪ್ರತಿ ವರ್ಷ ದೊಡ್ಡರೋಗದಿಂದ ಸತ್ತ ದನಗಳ ಸಂಖ್ಯೆ ಎರಡು ದಶಲಕ್ಷಕ್ಕೂ ಹೆಚ್ಚಿಗೆ ಇತ್ತು.(4)

ಪ್ಯಾರಿಸ್‌ನಲ್ಲಿ 1954-1964 ಹತ್ತು ವರ್ಷಗಳ ಅವಧಿಯಲ್ಲಿ 40,000 ರೋಗೋದ್ರೇಕಗಳಾಗಿ ರೋಗದಿಂದ ಒಂದು ದಶಲಕ್ಷ ದನಗಳು ಸತ್ತವು. (5)

2. ರೋಗಗ್ರಾಹಕ ಪ್ರಾಣಿಗಳು ಹಾಗೂ ರೋಗಕಾರಕಗಳು

ಆರ್ಟಿಯೋಡ್ಯಾಕ್ಟೈಲಾ ವರ್ಗದ (ಸಮಸಂಖ್ಯೆ ಕಾಲ್ಬೆರಳ ಪ್ರಾಣಿಗಳು) ಪ್ರಾಣಿಗಳೆಲ್ಲ ದೊಡ್ಡರೋಗಕ್ಕೆ ರೋಗಗ್ರಾಹಕತೆಯನ್ನು ಪಡೆದಿರುತ್ತವೆ. ದೊಡ್ಡರೋಗವು ಮುಖ್ಯವಾಗಿ ಮೆಲುಕು ಪ್ರಾಣಿಗಳ ರೋಗ. ದನ, ಎಮ್ಮೆ, ಕುರಿ ಇವೇ ಮುಂತಾದವು ರೋಗಗ್ರಾಹಕ ಪ್ರಾಣಿಗಳು. ಹಂದಿಗಳು ಈ ರೋಗವನ್ನು ಪಡೆಯುತ್ತವೆ. ಸ್ವಾಭಾವಿಕ ಸೋಂಕುಗಳು ದನ ಮತ್ತು ಎಮ್ಮೆಗಳಲ್ಲಿ ಮಾತ್ರ ಕಂಡುಬರುತ್ತವೆ. ಕಾಡೆಮ್ಮೆ, ಜಿರಾಫೆ, ಜಿಂಕೆ, ಕಾಡುಹಂದಿ, ನೀರಾನೆ ಇವೇ ಮುಂತಾದ ವಿವಿಧ ವನ್ಯಪ್ರಾಣಿಗಳಲ್ಲೂ ಈ ರೋಗದ ಸುಳಿವಿದೆ.[6] ಸಾಕುಪ್ರಾಣಿಗಳಲ್ಲಿ ನಮ್ಮ ದೇಶದ ನಾಟಿ(ಜೆಬು) ಜಾತಿಯ ದನಗಳು ಸಹಜವಾಗಿಯೇ ಹೆಚ್ಚು ನಿರೋಧನಾ ಶಕ್ತಿಯನ್ನು ಪಡೆದಿರುತ್ತವೆ.

ದೊಡ್ಡರೋಗವನ್ನುಂಟುಮಾಡುವ ವಿಷಾಣು (ವೈರಸ್)ಗಳಿಗೆ ದೊಡ್ಡರೋಗ ವಿಷಾಣುಗಳೆಂದೇ ಹೆಸರು. ಇವು 'ಮಿಕ್ಸೋವೈರಸ್' ಗುಂಪಿಗೆ ಸೇರಿದ ಆರ್. ಎನ್. ಎ. ವಿಷಾಣುಗಳು. ಇವು ಕೆನೈನ್ ಡಿಸ್‌ಟೆಂಪರ್ ವಿಷಾಣು ಮತ್ತು ಮನುಷ್ಯರ ದಢಾರದ (ಮೀಸಲ್ಸ್) ವಿಷಾಣುಗಳೊಡನೆ ಪ್ರತಿಜನಕೀಯ ಸಂಬಂಧವನ್ನು ಹೊಂದಿರುತ್ತವೆ.[7] ದೊಡ್ಡರೋಗ ವಿಷಾಣುಗಳನ್ನು ವಿವಿಧ ಪ್ರಾಣಿಗಳಿಂದ ಪ್ರತ್ಯೇಕಿಸಿದ್ದರೂ, ವಿವಿಧ ಪ್ರಾಣಿಗಳಲ್ಲಿಯೂ ವಿಭಿನ್ನ ರೋಗಾಣುಗ್ರತೆಯನ್ನು ಹೊಂದಿದ್ದರೂ, ಅವೆಲ್ಲವೂ ರೋಗ ಪ್ರತಿರಕ್ಷತಾ ಶಾಸ್ತ್ರೀಯವಾಗಿ ಏಕತೆಯನ್ನು ಹೊಂದಿರುತ್ತವೆ ಮತ್ತು ದೊಡ್ಡ ರೋಗ ವಿಷಾಣುಗಳಲ್ಲಿ ಉಪಭೇದಗಳಿದ್ದರೂ ರೋಗ ಪ್ರತಿರಕ್ಷತಾ ವಿಧವು ಒಂದೇ ಆಗಿರುತ್ತದೆ.[8] ಇದರಿಂದಾಗಿ ಯಾವುದೇ ಪ್ರಾಣಿಯಿಂದ ಪ್ರತ್ಯೇಕಿಸಿದ ದೊಡ್ಡರೋಗ ವಿಷಾಣುವಿನಿಂದ ತಯಾರಿಸಿದ 'ಲಸಿಕೆ'(ವ್ಯಾಕ್ಸೀನ್)ಯು ಪ್ರಾಣಿಗಳನ್ನು ಎಲ್ಲಾ ರೀತಿಯ ದೊಡ್ಡರೋಗ ವಿಷಾಣು ಪ್ರಭೇದಗಳಿಂದಲೂ ಸಂರಕ್ಷಿಸುತ್ತದೆ.

ಈ ವಿಷಾಣುಗಳು ಸುರುಳಿಯಾಕಾರವಾಗಿಯೂ, ಸೂಕ್ಷ್ಮರಚನೆಯುಳ್ಳವಾಗಿಯೂ ಇರುತ್ತವೆ. ಇವು ದುರ್ಬಲವಾಗಿರುತ್ತವೆ. ಇವು ಪರಿಸರದ ಬಲಗಳಿಗೂ, ಬಿಸಿಲಿಗೂ, ನೀಲಲೋಹಿತಾತೀತ ಕಿರಣಗಳಿಗೂ, ಬಾಷ್ಪೀಕರಣಕ್ಕೂ ಬಹುಬೇಗ ನಾಶಹೊಂದುತ್ತವೆ. ಇವು ಪಿಎಚ್ ಬದಲಾವಣೆಗಳಿಗೂ, ಕೊಳೆಯುವಿಕೆಗೂ ಈಡಾಗಿ ಬಹು ಬೇಗ ನಾಶಹೊಂದುತ್ತವೆಯಾದ್ದರಿಂದ ಉಷ್ಣವಲಯಗಳಲ್ಲಿ ದೊಡ್ಡರೋಗದಿಂದ ಸತ್ತ ಪಶುಶವ ಸ್ವಲ್ಪ ಹೊತ್ತಿನಲ್ಲಿಯೇ ಕೊಳೆತು, ಅವುಗಳಲ್ಲಿರುವ ವಿಷಾಣುಗಳು ನಾಶಹೊಂದುವುದರಿಂದ ಕೆಲವು ವೇಳೆ ಅಂತಹ ಪಶುಶವಗಳು ನಿರಪಾಯಕಾರಿಗಳಾಗುತ್ತವೆ.

೩. ರೋಗಪ್ರಸಾರ

ದೊಡ್ಡರೋಗವು ಅಂಟುಜಾಡ್ಯ. ಇದು ಪ್ರಾಣಿಯಿಂದ ಪ್ರಾಣಿಗೆ ಬಹು ಸುಲಭವಾಗಿ ಅಷ್ಟೇ ವೇಗವಾಗಿ ಹರಡುತ್ತದೆ. ದೊಡ್ಡರೋಗದ ಪ್ರಸಾರವು ಎರಡು ರೀತಿಯಲ್ಲಿ ನಡೆಯುತ್ತದೆ. ಒಂದನೆಯದಾಗಿ ನೇರಸಂಪರ್ಕದಿಂದ ಎರಡನೆಯದಾಗಿ ಪರೋಕ್ಷ ಸಂಪರ್ಕದಿಂದ, ದೊಡ್ಡರೋಗ ವಿಷಾಣುಗಳು ಬಹು ಸೂಕ್ಷ್ಮ ಸಂವೇಗಿಗಳಾದುದರಿಂದಲೂ, ಅವು ಪರಿಸರದ ಪ್ರಭಾವಗಳಿಂದ ಬಹುಬೇಗ ನಾಶ ಹೊಂದುತ್ತವೆ. ಆದ್ದರಿಂದ ಪರೋಕ್ಷವಾಗಿ ರೋಗ ಹರಡುವ ಸಂದರ್ಭಗಳು ಕಡಮೆ. ಆದರೂ ಸೋಂಕು ಕಲುಷಿತವಾಯು, ನೀರು ಮತ್ತು ಆಹಾರಗಳು ಸೋಂಕು ಪ್ರಸಾರದ ಮುಖ್ಯ ಮಾಧ್ಯಮಗಳಾಗಿರುತ್ತವೆ.

ಸೋಂಕುಪ್ರಾಣಿಯು ಇತರ ರೋಗಗ್ರಾಹಕ ಪ್ರಾಣಿಗಳ ಸಮುದಾಯಕ್ಕೆ ಸೋಂಕಿನ ಮುಖ್ಯ ಮೂಲವಾಗಿರುತ್ತದೆ. ಸೋಂಕುಪ್ರಾಣಿ ಮತ್ತು ರೋಗಗ್ರಾಹಕ ಪ್ರಾಣಿಗಳ ನೇರಸಂಪರ್ಕವು ಸೋಂಕು ಪ್ರಸಾರಕ್ಕೆ ಮುಖ್ಯ ಕಾರಣವಾಗುತ್ತದೆ. ರೋಗಗ್ರಾಹಕ ಪ್ರಾಣಿಸಮುದಾಯದಲ್ಲಿ ಶೇಕಡಾ ನೂರರಷ್ಟು ಸೋಂಕು ಪ್ರಸಾರವನ್ನು ಕಾಣಬಹುದು.

ಸೋಂಕು ಪ್ರಾಣಿಗಳು ರಕ್ತ, ಊತಕ, ವಿವಿಧಸ್ರಾವ ಮತ್ತು ವಿಸರ್ಜನಗಳಲ್ಲಿ ವಿಷಾಣುಗಳನ್ನು ಹೊಂದಿರುತ್ತವೆ. ಆದ್ದರಿಂದ ಸೋಂಕು ಪ್ರಾಣಿಗಳು ತಮ್ಮ ಸ್ರಾವ, ಜೊಲ್ಲು, ಸಿಂಬಳ, ಮತ್ತು ವಿಸರ್ಜನಗಳ(ಮಲ, ಮೂತ್ರ)ಮೂಲಕ ವಿಷಾಣುಗಳನ್ನು ಹೊರಚೆಲ್ಲುತ್ತಿರುತ್ತವೆ. ರೋಗದ ಪರಿಪಾಕಾವಸ್ಥೆಯಲ್ಲಿರುವ ದನಗಳು ಜ್ವರ ಕಾಣಿಸಿಕೊಳ್ಳುವ ಒಂದೆರಡು ದಿನಗಳ ಮುನ್ನವೇ ವಿಷಾಣುಗಳನ್ನು ವಿಸರ್ಜಿಸುತ್ತಿರುತ್ತವೆ. ರೋಗಗ್ರಸ್ತ ಪ್ರಾಣಿಗಳಲ್ಲಿ ಜ್ವರ ಉಲ್ಬಣಿಸಿದಾಗ, ಶರೀರದ ಶಾಖ ಅಧಿಕ ಮಟ್ಟವನ್ನು ಮುಟ್ಟಿ, ಅವುಗಳಲ್ಲಿನ ವಿಷಾಣುಗಳ ಸಂಖ್ಯೆಯೂ ಅಧಿಕವಾಗಿ, ಆ ಅವಸ್ಥೆಯಲ್ಲಿನ ಪ್ರಾಣಿಗಳಿಂದುಂಟಾಗುವ ವಿಷಾಣು ವಿಸರ್ಜನೆ ಮತ್ತು ರೋಗಪ್ರಸಾರ ಹೆಚ್ಚು ತೀವ್ರಗತಿಯಲ್ಲಿರುತ್ತದೆ. ಜ್ವರ ಇಳಿಮುಖವಾದರೂ ರೋಗಗ್ರಸ್ತ ಪ್ರಾಣಿಗಳಿಂದ ವಿಷಾಣು ವಿಸರ್ಜನೆಯಾಗುತ್ತಲೇ ಇರುತ್ತದೆ. ಹೀಗೆ ವಿಸರ್ಜಿತವಾಗುತ್ತಿರುವ ವಿಷಾಣುಗಳು ಪರಿಸರವನ್ನು ಕಲುಷಿತಗೊಳಿಸುತ್ತವೆ. ಗಾಳಿ, ನೀರು, ಹುಲ್ಲು, ತಳಹಾಸು, ಬಟ್ಟೆಬರೆ, ಪಾತ್ರೆ, ತೊಟ್ಟಿ ಮತ್ತು ಇತರ ಪದಾರ್ಥಗಳು ವಿಸರ್ಜಿತ ವಿಷಾಣುಗಳಿಂದ ಕಲುಷಿತವಾಗಿ ಒತ್ತಟ್ಟಿಗಿರುವ ಮತ್ತು ಸಮೀಪದ ರೋಗಗ್ರಾಹಕ ಪ್ರಾಣಿಗಳಿಗೆ ಸೋಂಕನ್ನು ಹರಡುತ್ತವೆ. ಸೋಂಕುಪ್ರಾಣಿಗಳ ಮಲ, ಮೂತ್ರ, ಜೊಲ್ಲು,

ಸಿಂಬಳ ಮುಂತಾದವುಗಳಿಂದ ಕಲುಷಿತವಾದ ಆಹಾರವನ್ನು ತಿನ್ನುವುದರಿಂದ ರೋಗ ಗ್ರಾಹಕ ಪ್ರಾಣಿಗಳು ಸೋಂಕು ಪಡೆಯುವುದು ಸಾಮಾನ್ಯ. ಹಂದಿಗಳಲ್ಲಿ ಇದು ಮುಖ್ಯಮಾರ್ಗ.[6] ಪ್ರಾಣಿಗಳು ಮುಖ್ಯವಾಗಿ ಉಸಿರಿನ ಮೂಲಕವೇ ರೋಗವನ್ನು ಪಡೆಯುತ್ತವೆ.[5] ರೋಗಗ್ರಸ್ತ ದನಗಳು ಎಲ್ಲ ಮಾರ್ಗಗಳಿಗಿಂತಲೂ ಮೂಗಿನ ಮೂಲಕವೇ ಅಧಿಕ ಪ್ರಮಾಣದಲ್ಲಿ ವಿಷಾಣುಗಳನ್ನು ವಿಸರ್ಜಿಸುತ್ತವೆ.[5]

ದನಗಳು ಇತರ ಜಾತಿಯ ಪ್ರಾಣಿಗಳಿಂದಲೂ ಸೋಂಕು ಪಡೆಯುತ್ತವೆ. ಹಂದಿ, ಕುರಿ, ಮೇಕೆ, ಒಂಟೆ ಹಾಗೂ ಮೆಲಕು ಹಾಕುವ ಕೆಲವು ವನ್ಯಮೃಗಗಳೂ ದನಗಳಿಗೆ ದೊಡ್ಡರೋಗವನ್ನು ಹರಡುತ್ತವೆ. ಅದೇ ರೀತಿ ದನಗಳು ಇತರ ಜಾತಿಯ ಪ್ರಾಣಿಗಳಿಗೂ ದೊಡ್ಡರೋಗವನ್ನು ಹರಡಬಹುದು. ದನಗಳು, ಅವುಗಳ ಹತ್ತಿರದಲ್ಲಿಯೇ ಕಟ್ಟಿದ್ದ ಒಂಟೆಗಳಿಗೆ ದೊಡ್ಡರೋಗವನ್ನು ಹರಡಿದ ಪ್ರಸಂಗವೊಂದನ್ನು ಆಫ್ರಿಕಾದ ವರದಿ ತಿಳಿಸುತ್ತದೆ.

ಕಾಡುಪ್ರಾಣಿಗಳು ಕಾಡಿಗೆ ಸಮೀಪವಿರುವ ಸಾಕುಪ್ರಾಣಿಗಳಿಗೆ ಸೋಂಕು ಪ್ರಸಾರ ಮಾಡುತ್ತವೆ. ಕಾಡಿನ ಅಂಚಿನಲ್ಲಿರುವ ಅಥವಾ ಸಮೀಪ ಪ್ರದೇಶಗಳಲ್ಲಿನ ಸಾಕುಪ್ರಾಣಿಗಳು ಮೇಯಲು ಕಾಡಿಗೆ ಹೋಗುವುದು ಸ್ವಾಭಾವಿಕ. ಜನರೂ ಸಹ ತಮ್ಮ ಸಾಕುಪ್ರಾಣಿಗಳನ್ನು ಮೇಯಿಸಿಕೊಂಡು ಬರಲು ಕಾಡಿನ ಸಮೀಪದವರೆಗೆ ಅಟ್ಟಿಸಿಕೊಂಡು ಹೋಗುವರು. ಆ ಸಮಯದಲ್ಲಿ ದೊಡ್ಡರೋಗದಿಂದ ನರಳುತ್ತಿರುವ ಕಾಡುಪ್ರಾಣಿಗಳ ಸ್ರಾವ ಮತ್ತು ವಿಸರ್ಜಕಗಳಿಂದ ಕಲುಷಿತವಾದ ಗಾಳಿ, ನೀರು ಹಾಗೂ ಹುಲ್ಲಿನಿಂದ ಆರೋಗ್ಯಕರವಾದ ಸಾಕುಪ್ರಾಣಿಗಳು ದೊಡ್ಡರೋಗವನ್ನು ಪಡೆಯಬಹುದು. ಇಲ್ಲವೇ ಕಾಡುಪ್ರಾಣಿಗಳೇ ಕಾಡುಗಳಿಂದ ಹೊರಬಂದು ತಮ್ಮ ಮಲ, ಮೂತ್ರ ಜೊಲ್ಲುಗಳಲ್ಲಿ ವಿಷಾಣುಗಳನ್ನು ವಿಸರ್ಜಿಸುತ್ತ ಕಾಡಿಗೆ ಸಮೀಪವಿರುವ ಹಳ್ಳಿ ಪ್ರದೇಶಗಳನ್ನು ದೊಡ್ಡರೋಗದ ವಿಷಾಣುಗಳಿಂದ ಕಲುಷಿತ ಗೊಳಿಸಬಹುದು. ಅಂಥ ಸಮಯದಲ್ಲಿ ಸಾಕುಪ್ರಾಣಿಗಳು ಕಾಡುಗಳನ್ನು ಪ್ರವೇಶಿಸಬೇಕಾಗಿಲ್ಲ. ಕಾಡು, ಪ್ರಾಣಿಗಳ ಸ್ರಾವ, ವಿಸರ್ಜನೆಗಳಿಂದ ಕಲುಷಿತವಾದ ಗಾಳಿಯ ಸೇವನೆಯಿಂದಲೂ, ನೀರು ಕುಡಿಯುವುದರಿಂದಲೂ, ಹುಲ್ಲು ಮೇಯುವುದರಿಂದಲೂ ಸಾಕುಪ್ರಾಣಿಗಳು ಸೋಂಕು ಪಡೆಯುತ್ತವೆ.

ಇಂದಿನ ದಿನಗಳಲ್ಲಿ ಸೋಂಕುಪ್ರಾಣಿಗಳ ಸಂಚಾರ ಮತ್ತು ಅವುಗಳ ಚರ್ಮ, ಮಾಂಸ ಮತ್ತಿತರ ಪದಾರ್ಥಗಳ ಆಮದು, ರಫ್ತಿನ ವ್ಯವಹಾರಗಳು ದೊಡ್ಡ ರೋಗದ ಪ್ರಸಾರಕ್ಕೂ, ಅಲ್ಲಲ್ಲಿ ರೋಗವಿಮುಕ್ತ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುವ ರೋಗೋದ್ರೇಕಗಳಿಗೂ ಕಾರಣವಾಗಿರುತ್ತವೆ. ನಮ್ಮ ದೇಶದಲ್ಲಿ ಪದೇಪದೇ ಕಾಣಿಸಿಕೊಳ್ಳುವ ರೋಗೋದ್ರೇಕಗಳಿಗೂ, ಕೆಲವು ಕಾಲದವರೆಗೆ ರೋಗವಿಮುಕ್ತ ಹೊಂದಿ

ರುವ ಪ್ರದೇಶಗಳಲ್ಲಿ ಇದ್ದಕ್ಕಿದ್ದಂತೆ, ಕಾಣಿಸಿಕೊಳ್ಳುವ ಹೊಸಹೊಸ ರೋಗೋದ್ರೇಕಗಳಿಗೂ ತಡೆಯಿಲ್ಲದೆ ಸಾಗುತ್ತಿರುವ ಪ್ರಾಣಿ ವ್ಯವಹಾರವೇ ಮುಖ್ಯಕಾರಣವಾಗಿರುತ್ತದೆ.

ಕಳೆದ ಹದಿನಾರು ವರ್ಷಗಳಿಂದಲೂ ದೊಡ್ಡ ರೋಗದಿಂದ ವಿಮುಕ್ತಗೊಂಡಿದ್ದ ಅಮೇರಿಕೆಯ ಫಿಲಡೆಲ್ಫಿಯದಲ್ಲಿ ಮತ್ತೆ ಕ್ರಿ.ಶ. 1955ರಲ್ಲಿ ಕಾಣಿಸಿಕೊಂಡ ದೊಡ್ಡ ರೋಗಕ್ಕೆ ಭಾರತದಿಂದ ಆಮದು ಮಾಡಿಕೊಂಡ ಎಮ್ಮೆಗಳೇ ಕಾರಣವಾಗಿತ್ತು ಎಂದು ಹೇಳಲಾಗಿದೆ.[10]


ರೋಗಗ್ರಸ್ತ ಪ್ರಾಣಿಗಳ ಮಾಂಸವು ಅನೇಕ ಕಡೆಗಳಲ್ಲಿ ಕಂಡುಬರುವ ರೋಗೋದ್ರೇಕಗಳಿಗೆ ಕಾರಣವಾಗಿರುತ್ತದೆ. ಅಂಥ ಒಂದು ಪ್ರಸಂಗವನ್ನು ಇಟಲಿಯ ಒಂದು ಸಂದರ್ಭವು ಉದಾಹರಿಸುತ್ತದೆ.[11] ಬ್ರಿಟಿಷ್ ಸೈನ್ಯಕ್ಕೆ ಆಹಾರವಾಗಿ ದೊಡ್ಡ ರೋಗದ ವರದಿ ಇದ್ದ ಫಿಲಿಪೈನ್ಸ್ ದ್ವೀಪಗಳಿಂದ ಆಮದುಮಾಡಿಕೊಂಡ ಹಿಮಶೀತ ಮಾಂಸವು ಇಟಲಿಯಲ್ಲಿ ರೋಗೋದ್ರೇಕಕ್ಕೆ ಕಾರಣವಾಯಿತು. ಈ ರೋಗವು ಕಾಣಿಸಿಕೊಂಡ ದನದ ಕೊಟ್ಟಿಗೆ ಹಾಗೂ ಅವರ ಸುತ್ತಮುತ್ತಲಿನ ಹಿಮಶೀತ ಮಾಂಸವನ್ನು ಸುತ್ತಿದ ಹಾಳೆಗಳು ಬಿದ್ದಿರುವುದು ಕಂಡುಬಂದಿತು. ಮಾಂಸ ಸುತ್ತಿದ ಹಾಳೆಗಳಿಂದ ಕಲುಷಿತವಾದ ನೀರೇ ಈ ರೋಗ ಪ್ರಸಾರಕ್ಕೆ ಕಾರಣವಾಗಿತ್ತು.

4. ರೋಗೋತ್ಪತ್ತಿ

ವಿಷಾಣುಗಳು ರೋಗಗ್ರಾಹಕ ಪ್ರಾಣಿಗಳ ಮೂಗು ಮತ್ತು ಬಾಯಿಯ ಮೂಲಕ ಶರೀರವನ್ನು ಪ್ರವೇಶಿಸುತ್ತವೆ. ಮೂಗಿಸಿಂದಲೇ ವಿಷಾಣುಗಳು ಶರೀರದೊಳಕ್ಕೆ ಪ್ರವೇಶಿಸುವುದು ಹೆಚ್ಚು ಸಾಮಾನ್ಯ.. ಹಾಗೆ ಪ್ರವೇಶಿಸಿದ ವಿಷಾಣುಗಳು ಹಾಲ್ರಸದ ಊತಕಗಳಿಂದ ಹೆಚ್ಚು ಆಕರ್ಷಿಸಲ್ಪಡುತ್ತವೆ. ಮೂಗಿನ ಲೋಳ್ಪರೆಯ ಮೂಲಕ ಪ್ರವೇಶಿಸುವ ವಿಷಾಣುಗಳು ಸ್ಥಳಿಕ ಹಾಲ್ರಸಗಂಟುಗಳಲ್ಲಿ, ಕೆಳದವಡೆಯ ಹಾಲ್ರಸಗಂಟುಗಳು ಮತ್ತು ವೆಂಡಿಕೆ(ಟಾನ್ಸಲ್ಸ್)ಗಳಲ್ಲಿ ಪ್ರಾಥಮಿಕ ವಂಶಾಭಿವೃದ್ಧಿ ಹೊಂದಿ ಅಲ್ಲಿಂದ ರಕ್ತವನ್ನು ಸೇರಿ ವಿಷಾಣುರಕ್ತತೆಯನ್ನುಂಟುಮಾಡುತ್ತವೆ. ಈ ಅವಧಿಯವರೆಗೆ 'ರೋಗ ಪರಿಪಾಕಾವಸ್ಥೆಯ ಅವಧಿ' ಎಂದು ಹೆಸರು. ರಕ್ತದ ಮೂಲಕ ವಿಷಾಣುಗಳು ವಿಜಾಲೋತ್ಪರ ಅಂಗ(ರೆಟಿಕ್ಯುಲೋ ಎಂಡೋಥೀಲಿಯಲ್ ಸಿಸ್ಟಂ)ವ್ಯೂಹವನ್ನು (ಈಲಿ, ಪ್ಲೀಹ ಮುಂತಾದವು) ಪ್ರವೇಶಿಸಿ ಸರ್ವಾಂಗಸೋಂಕನ್ನು ಉಂಟುಮಾಡುತ್ತವೆ. ಈ ಅಂಗಾಂಗಗಳಲ್ಲಿ ವಂಶಾಭಿವೃದ್ಧಿ ಹೊಂದಿದ ವಿಷಾಣುಗಳು ಅರ್ಧಸಂಖ್ಯೆಯಲ್ಲಿ ರಕ್ತವನ್ನು ಸೇರುತ್ತವೆ. ಆಗ ಪ್ರಾಣಿಗಳಲ್ಲಿ ಜ್ವರ ಹಾಗೂ ಇತರ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ವಿಷಾಣುಗಳ ಸ್ವಲ್ಪ ಭಾಗವು ಬಿಳಿರಕ್ತಕಣಗಳಿಗೆ ಅಂಟಿಕೊಂಡಿದ್ದು ಇನ್ನುಳಿದ ಭಾಗವು ರಕ್ತರಸ(ಪ್ಲಾಸ್ಮ)ದಲ್ಲಿ ಸ್ವತಂತ್ರವಾಗಿ ತೇಲಾಡುತ್ತಿರುತ್ತವೆ. ಹೀಗೆ, ಬಿಳಿರಕ್ತ ಕಣಗಳಿಗೆ(ನ್ಯೂಟ್ರೋಫಿಲ್ಸ್) ಬಿಗಿಯಾಗಿ ಅಂಟಿಕೊಂಡಿರುವ ವಿಷಾಣುಗಳು ತಮ್ಮ ಒಲವಿನ ಭಾಗಗಳಾದ ಹಾಲ್ರಸ ಗ್ರಂಥಿಗಳನ್ನು, ಬಾಯಿಯ ಹಾಗೂ ಜಠರ ಮತ್ತು ಕರುಳಿನ ಲೋಳ್ಪರೆಯನ್ನು ತಲುಪಿ ಅಲ್ಲಿನ ಕೋಶಿಕೆಗಳನ್ನು ಗಾಯಗೊಳಿಸುತ್ತವೆ. ಹಾಲ್ರಸ ಗ್ರಂಥಿಗಳಲ್ಲಿರುವ ಹಾಲ್ರಸ ಕಣಗಳನ್ನು ನಾಶಪಡಿಸುತ್ತವೆ.

5. ರೋಗ ಲಕ್ಷಣಗಳು


ಸಾಮಾನ್ಯವಾಗಿ ದೊಡ್ಡರೋಗದಲ್ಲಿ ರೋಗ ಪರಿಪಾಕಾವಸ್ಥೆಯ ಕಾಲ 6-8 ದಿನಗಳು. ವಿಷಾಣುಗಳ ಕೆಲವು ಉಗ್ರವಿಧಗಳ ವಿಷಯದಲ್ಲಿ ರೋಗ ಪರಿಪಾಕಾವಸ್ಥೆಯ ಕಾಲ ಇನ್ನೂ ಕಡಮೆ, ಅಂದರೆ ಮೂರು ಅಥವಾ ನಾಲ್ಕು ದಿನಗಳು. ಈ ರೋಗ ಪರಿಪಾಕಾವಸ್ಥೆಯ ಕಾಲ ಮುಗಿದ ನಂತರ, 24 ಗಂಟೆಗಳೊಳಗಾಗಿ ಪ್ರಥಮ ರೋಗ



ಚಿತ್ರ 1 : ರೋಗಪೀಡಿತ ಪ್ರಾಣಿಯ ಬಾಯಿಂದ ಜೊಲ್ಲು ಸುರಿಯುತ್ತಿರುವಿಕೆ

ಚಿಹ್ನೆಯಾಗಿ ಜ್ವರ ಕಾಣಿಸಿಕೊಳ್ಳುತ್ತದೆ. ದೇಹದ ಶಾಖವು 104°F ತೋರಿಸಿಕೊಳ್ಳುತ್ತದೆ. ಜ್ವರ ಕಾಣಿಸಿಕೊಂಡ ಒಂದೆರಡು ದಿನಗಳಲ್ಲಿ ರೋಗಗ್ರಸ್ತ ಪ್ರಾಣಿಗಳಲ್ಲಿ ಹಸಿವಿಲ್ಲದಿರುವಿಕೆ, ಬಾಯಾರಿಕೆ, ಮಾಂದ್ಯತೆ (ನಿರುತ್ಸಾಹ), ಬೆಳಕಿನಂಜಿಕೆ, ತ್ವರಿತ ಉಸಿರಾಟ ಮತ್ತು ನಾಡಿಬಡಿತ, ನಿಧಾನವಾಗಿ ಮೆಲುಕುಹಾಕುವಿಕೆ, ಕಣ್ಣು ಮತ್ತು ಮೂಗುಗಳಿಂದ ಸುರಿಕೆ, ಮಲಬದ್ಧತೆ, ಒಣಗಿದ ಮುಸುಡಿ, ಚಡಪಡಿಕೆ, ಒರಟು ಚರ್ಮ ಇವೇ ಮೊದಲಾದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಜ್ವರ ಕಾಣಿಸಿಕೊಂಡ ನಂತರ ಎರಡು ಅಥವಾ ಮೂರನೆಯ ದಿನದಲ್ಲಿ ಬಾಯಲ್ಲಿ ರೋಗವಿಕ್ಷತಿಗಳು

ಕಾಣಿಸಿಕೊಳ್ಳುತ್ತವೆ. ಜ್ವರದ ಮೂರು ಅಥವಾ ಐದನೆಯ ದಿನದಲ್ಲಿ ಏರುತ್ತಿರುವ ಜ್ವರ ಗರಿಷ್ಠ ಮಟ್ಟವನ್ನು ಮುಟ್ಟಿ, ದೇಹದ ಶಾಖ 107°F ಇರುತ್ತದೆ. ನಂತರ ಕ್ರಮೇಣ ಜ್ವರ ಇಳಿಮುಖವಾಗತೊಡಗುತ್ತದೆ. ಆಗ ರೋಗದ ಒಂದು ಪ್ರಮುಖ




ಚಿತ್ರ 2 : ರೋಗಪೀಡಿತ ಎತ್ತಿನ ಕಣ್ಣಿನಿಂದ ನೀರು ಸುರಿಯುತ್ತಿರುವಿಕೆ

ಲಕ್ಷಣವಾದ ಬಿರುಸಿನ ಭೇಧಿ ಕಾಣಿಸಿಕೊಳ್ಳುತ್ತದೆ. ಭೇಧಿ ಪಿಚಕಾರಿಯಿಂದ ರಭಸದಿಂದ ಹೊರಬರುವ ನೀರಿನಂತಿರುತ್ತದೆ. ಅತಿ ಭೇಧಿಯ ಕಾರಣದಿಂದಾಗಿ ದೇಹದಲ್ಲಿ ನೀರಿನ ಅಂಶ ನಷ್ಟವಾಗಿ(ನಿರ್ಜಲೀಕರಣ) ಮೈ ಒಣಗುವುದು. ಹೊಟ್ಟೆನೋವು, ತ್ವರಿತ ಉಸಿರಾಟ, ನಿತ್ರಾಣ, ಇವೇ ಮುಂತಾದ ರೋಗಲಕ್ಷಣಗಳು ಕಾಣಿಸಿಕೊಂಡು ಶರೀರದ ಶಾಖವು ಸಾಮಾನ್ಯ ಶಾಖಕ್ಕಿಂತಲೂ (ಮಾಮೂಲಿಗಿಂತಲೂ) ಕಡಮೆಯಾಗಿ, ಪ್ರಾಣಿಗಳು 8 ಅಥವಾ 12 ದಿನಗಳಲ್ಲಿ ಸಾಯುತ್ತವೆ.

ಬಾಯಲ್ಲಿ ಕಾಣಿಸಿಕೊಳ್ಳುವ ರೋಗವಿಕ್ಷತಿಗಳು ದೊಡ್ಡರೋಗದ ಒಂದು ಪ್ರಮುಖ ರೋಗಲಕ್ಷಣ. ಇವು ಕೆಳತುಟಿ, ಒಸಡು, ನಾಲಿಗೆಯ ತಳಭಾಗ, ದವಡೆ ಸಂಯೋಜಕ ಸಂದುಗಳಲ್ಲಿಯೂ ಸಣ್ಣಸಣ್ಣ ಬಿಂದುರೂಪದ, ಬಿಡಿ ಬಿಡಿಯಾದ ಅನೇಕ ಪರಿಗಲಿತ ರೋಗವಿಕ್ಷತಿಗಳು ಕಂಡುಬರುತ್ತವೆ. ಇವು ಕ್ರಮೇಣ ನಾಲಿಗೆಯ ಮೇಲ್ಭಾಗವೊಂದನ್ನು ಬಿಟ್ಟು ಬಾಯಿಯ ಉಳಿದೆಲ್ಲ ಕಡೆಗಳಲ್ಲೂ ಕಾಣಿಸಿಕೊಳ್ಳು

ತ್ರವೆ. ಅಂತಹವೇ ರೋಗವಿಕೃತಿಗಳನ್ನು ಮೂಗು, ಯೋನಿ, ಭಗ ಭಾಗಗಳ ಲೋಳ್ಪರೆಗಳಲ್ಲೂ ಕಾಣಬಹುದು.

ರೋಗಗ್ರಸ್ತ ಪ್ರಾಣಿಗಳ ಬಾಯಿಂದ ಬುರುಗಿನಂತಹ ರಕ್ತಮಿಶ್ರಿತ ಜೊಲ್ಲು ಸುರಿಯತೊಡಗುವುದು. ರೋಗಗ್ರಸ್ತ ಪ್ರಾಣಿಗಳ ಬಾಯನ್ನು ತೆರೆದು ಪರೀಕ್ಷಿಸಿದಾಗ ಕೆಳತುಟಿ, ಒಸಡು, ನಾಲಿಗೆಯ ತಳಭಾಗ ಮುಂತಾದ ಭಾಗಗಳಲ್ಲಿ ಪರಿಗಲಿತ ರೋಗವಿಕೃತಿಗಳು ಗೋಧಿಹೊಟ್ಟಿನ ಸ್ವರೂಪವನ್ನು ಕೊಡುವುದು. ನೋಡಿದವರಿಗೆ,



ಚಿತ್ರ 3 : ಬಿರುಸಿನ ಬೇಧಿ ಲಕ್ಷಣ ತೋರುತ್ತಿರುವ ರೋಗಪೀಡಿತ ಪ್ರಾಣಿ

ಪ್ರಾಣಿ ಆಗ ತಾನೆ ಗೋಧಿಹೊಟ್ಟನ್ನು ತಿನ್ನುತ್ತಿದ್ದು, ಗೋಧಿಹೊಟ್ಟು ಬಾಯಲ್ಲಿ ಅಂಟಿಕೊಂಡಿದೆಯೋ ಎಂಬ ಭಾವನೆ ನೀಡುತ್ತದೆ. ಗೋಧಿ ಹೊಟ್ಟಿನಂತಹ ವಸ್ತುವನ್ನು ಒರೆಸಿ ಪರೀಕ್ಷಿಸಿದಾಗ, ಅದರ ಕೆಳಗೆ ಕೆಂಪಾದ ಹಾಗೂ ಒರಟಾದ ಭಾಗಗಳು ಕಂಡು

ಬರುತ್ತವೆ. ಕೆಲವು ಸಂದರ್ಭಗಳಲ್ಲಿ ವೃಷಣಕೋಶ (ತಡ್ಡುಚೀಲ), ತೊಡೆ, ಸ್ತನ, ಕತ್ತು ಮುಂತಾದ ಭಾಗಗಳಲ್ಲೂ ರೋಗವಿಕ್ಷತಿಗಳು ಕಾಣಿಸಿಕೊಳ್ಳಬಹುದು.

ದೊಡ್ಡರೋಗವು ಮೂರು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ: 1) ತೀವ್ರ ರೂಪ 2) ಅತಿ ತೀವ್ರರೂಪ ಮತ್ತು 3) ಅನುತೀವ್ರರೂಪ.

ತೀವ್ರರೂಪದ ದೊಡ್ಡರೋಗದಲ್ಲಿ ಮೇಲೆ ತಿಳಿಸಿದ ಎಲ್ಲ ವಿಶಿಷ್ಟ ರೋಗ ಲಕ್ಷಣಗಳೂ ಬರುತ್ತವೆ.



ಚಿತ್ರ 4: ರೋಗಪೀಡಿತ ಪ್ರಾಣಿಯ ಒಸಡುಗಳ ಒಳಭಾಗದಲ್ಲಿ ವ್ರಣ ಹಾಗೂ ಹೊಟ್ಟು ಎರಚಿದಂತೆ ಕಾಣುತ್ತಿರುವಿಕೆ

ಅತಿ ತೀವ್ರರೂಪದ ದೊಡ್ಡರೋಗದಲ್ಲಿ ಶರೀರದ ಎಲ್ಲ ಲೋಳ್ಪರೆಗಳೂ ರಕ್ತಾಧಿಕ್ಯ (ರಕ್ತತುಂಬಿ)ಗೊಂಡು ಕೆಂಪಾಗಿರುತ್ತವೆ. ಶರೀರದ ಶಾಖ ಅತಿ ಹೆಚ್ಚಾಗಿರುವುದು. ಭೇಧಿ ಕಾಣಿಸಿಕೊಳ್ಳುವ ಮುನ್ನವೇ ಪ್ರಾಣಿಗಳು ಸಾಯುತ್ತವೆ.

ಅನುತೀವ್ರರೂಪದ ದೊಡ್ಡರೋಗದಲ್ಲಿ ಜ್ವರ ಮುಂತಾದ ರೋಗಲಕ್ಷಣಗಳು ಸಾಮಾನ್ಯವಾಗಿರುತ್ತವೆ. ಈ ರೂಪವು ಸ್ವಲ್ಪ ರೋಗನಿರೋಧನಾ ಶಕ್ತಿಯನ್ನು ಹೊಂದಿ

ರುವ ಪ್ರಾಣಿಗಳಲ್ಲೂ, ಕಾಲಕಾಲ್ಕಗಳಲ್ಲಿ ತಪ್ಪದೆ ರೋಗ ತಲೆದೋರುತ್ತಿರುವ ಪ್ರದೇಶಗಳಲ್ಲಿನ ಪ್ರಾಣಿಗಳಲ್ಲೂ ಕಂಡುಬರುತ್ತದೆ.

ದನಗಳಲ್ಲಿ ಕಂಡುಬರುವಂತಹ ರೋಗಲಕ್ಷಣಗಳೇ ಕುರಿ, ಮೇಕೆ ಮತ್ತಿತರ ಪ್ರಾಣಿಗಳಲ್ಲೂ ಕಂಡುಬರುತ್ತವೆ. ಆದರೆ ಈ ಪ್ರಾಣಿಗಳಿಂದ ದನಗಳಿಗೆ ರೋಗವು ಶೀಘ್ರವಾಗಿ ಹರಡುವಂತೆ ಕಂಡುಬರುವುದಿಲ್ಲ.

೬. ರೋಗ ವಿಕ್ಷತಿಗಳು

ದೊಡ್ಡರೋಗ ವಿಷಾಣುಗಳಿಗೂ ಹಾಲ್ರಸಾದಿ ಊತಕಗು ಮತ್ತು ಜೀರ್ಣಾಂಗಳ ನಾಳದ ಉದ್ದಕ್ಕೂ ಇರುವ ಮೇಲ್ಪರೆ ಕೋಶಿಕೆಗಳಿಗೂ ನಂಟುತನ ಹೆಚ್ಚು. ವಿಷಾಣುಗಳು ಈ ಭಾಗಗಳಿಂದ ಆಕರ್ಷಿಸಲ್ಪಟ್ಟು, ಅಲ್ಲಿ ಅಪಾಯಕರ ಹಾಗೂ ವಿಶಿಷ್ಟ ರೀತಿಯ ಪರಿಣಾಮವನ್ನುಂಟುಮಾಡುತ್ತವೆ. ರೋಗ ವಿಶಿಷ್ಟ ಸೂಕ್ಷ್ಮದಾರ್ಶನಿಕ ಬದಲಾವಣೆಗಳು ಮೇಲಿನ ಎರಡು ರೀತಿಯ ಊತಕಗಳಲ್ಲೂ ಕಂಡುಬಂದರೂ, ಬಾಯಿ, ಜಠರ, ಕರುಳು ಭಾಗಗಳಲ್ಲಿ ಚೆನ್ನಾಗಿ ಗೋಚರವಾಗುತ್ತವೆ. ಹಾಲ್ರಸಾದಿ ಊತಕಗಳಲ್ಲಿ ವಿಷಾಣುಗಳು ಹಾಲ್ರಸಕಣಗಳನ್ನು ನಾಶಪಡಿಸುತ್ತವೆ. ಹಾಲ್ರಸಗಂಟು, ಪ್ಲೀಹ ಪೇಯರಿನ ಮಚ್ಚೆಗಳನ್ನು ಅಡ್ಡಡ್ಡವಾಗಿ ಕೊಯ್ದು, ಆ ಅಡ್ಡಕೊಯ್ತಗಳನ್ನು ಸೂಕ್ಷ್ಮದರ್ಶಿಯಿಂದ ಪರೀಕ್ಷಿಸಿದಾಗ ನಾಶಹೊಂದಿದ ಹಾಲ್ರಸಕಣಗಳು ಕಂಡು ಬರುತ್ತವೆ.


ಬಾಯಿಯ ಲೋಳ್ಪರೆ ಮತ್ತು ವಿಷಾಣುಗಳಿಗೆ ಅಷ್ಟು ನಂಟುತನವಿದ್ದರೂ ವಿಷಾಣುಗಳನ್ನೇ ನೇರವಾಗಿ ಬಾಯಿಯ ಲೋಳ್ಪರೆಯ ಮೇಲಿಟ್ಟಾಗ ಅವು ಅಷ್ಟು ತ್ವರಿತವಾಗಿ ಅಲ್ಲಿ ಸೋಂಕು ಸ್ಥಾಪನೆ ಮಾಡಲಾರವು. ವಿಷಾಣುಗಳು ಯಾವುದೇ ಮಾರ್ಗದಿಂದ ಶರೀರವನ್ನು ಪ್ರವೇಶಿಸಿದರೂ ಅವು ರಕ್ತವನ್ನು ಸೇರಿ, ರಕ್ತದ ಮೂಲಕವೇ ಬಾಯಿಯ ಲೋಳ್ಪರೆಗೆ ಬರಬೇಕು ಎಂದು ಇದು ಸೂಚಿಸುತ್ತದೆ.(13)

ಬಾಯಿ, ಜಠರ ಮತ್ತು ಕರುಳಿನ ಲೋಳ್ಪರೆಯು ಅಧಿಕ ರಕ್ತದಿಂದ ತುಂಬಿಕೊಂಡು, ಕೆಂಪಗಾಗಿರುತ್ತದೆ. ಅಲ್ಲದೆ ಅಲ್ಲಲ್ಲಿ ಲೋಳ್ಪರೆಯ ಮೇಲೆ ರಕ್ತಸ್ರಾವದ ಕಲೆಗಳಿರುತ್ತವೆ.

ಬಾಯಲ್ಲಿ ಅಂದರೆ, ಕೆಳತುಟಿ, ಒಸಡು, ನಾಲಿಗೆಯ ಕೆಳಭಾಗ, ಬಾಯಿಗೂಡು ಭಾಗಗಳಲ್ಲಿರುವ ಲೋಳ್ಪರೆಯು ಅನೇಕ ಸಣ್ಣ ಸಣ್ಣ, ಬಿಂದುರೂಪದ ಪರಿಗಲಿತ ಮೃತೋತಕಾಂಶ ಒಳಗೊಂಡ ರೋಗವಿಕ್ಷತಿಗಳಿಂದ ತುಂಬಿರುತ್ತದೆ. ಪ್ರತಿಯೊಂದು ರೋಗವಿಕ್ಷತಿಯೂ ಆರೋಗ್ಯಕರ ಮೇಲ್ಪರೆಯಿಂದ ಸುತ್ತುವರಿಯಲ್ಪಟ್ಟು, ಒಂದರಿಂದ ಒಂದು ಪ್ರತ್ಯೇಕಗೊಂಡಿರುತ್ತವೆ. ಆದ್ದರಿಂದ ಹೀಗೆ ಪ್ರತ್ಯೇಕವಾಗಿ ತಿಳಿಬೂದು ಬಣ್ಣದ ಮೃತಾಂಗಾಂಶಗಳಿಂದ ಮೇಲುಬ್ಬಿದ, ಬಿಂದುಗಳಾಗಿ ಕಾಣಿಸುವ ಇವು ಕರಡಿದ ಗೋಧಿ ಹೊಟ್ಟಿನ ದೃಶ್ಯವನ್ನು ನೀಡುತ್ತದೆ. ಇಂತಹ ಅನೇಕ ಸಣ್ಣಸಣ್ಣ ಪರಿಗಲಿತ ಬಿಂದುಗಳು ಒಂದುಗೂಡಿ ದೊಡ್ಡವಾಗಿ ಸವೆತ ಗಾಯಗಳಾಗಿ ಪರಿಣಮಿಸು

ತ್ತವೆ. ಈ ಸವೆತಗಾಯಗಳು ಸಾಮಾನ್ಯವಾಗಿ ಪಗರಿನ ಮೇಲ್ಪರೆಯ ಆಧಾರಸ್ತರವನ್ನು ಕೊರೆದು ಆಳಕ್ಕೆ ಪ್ರವೇಶಿಸುವುದಿಲ್ಲ; ಕಾರಣ, ಇವು ಆಳ ವ್ರಣಗಳಾಗಿ ರೂಪುಗೊಳ್ಳುವುದಿಲ್ಲ. ಈ ರೋಗ ವಿಕ್ಷತಿಗಳನ್ನು ಸೂಕ್ಷ್ಮವಾಗಿ, ಬೆಳಕಿನಲ್ಲಿ ಪರೀಕ್ಷಿಸಿದಾಗ, ಇವು ಆಳವಲ್ಲದ ಮೇಲು ಗಾಯಗಳಂತಿದ್ದು, ಇವುಗಳ ತಳಭಾಗವು ಕೆಂಪಾಗಿಯೂ, ಒರಟಾಗಿಯೂ ಇರುತ್ತದೆ. ರೋಗದ ಉಲ್ಬಣಾವಸ್ಥೆಯಲ್ಲಿ ಈ ರೋಗ ವಿಕ್ಷತಿಗಳು ಅಂಗುಳು ಹಾಗೂ ಗಂಟಲು ಕುಹರದವರೆಗೂ ಹರಡಿರುತ್ತವೆ.


ದೊಡ್ಡರೋಗ ವಿಕ್ಷತಿಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಜೀರ್ಣನಾಳದ ಮತ್ತೊಂದು ಪ್ರಮುಖ ಭಾಗವೆಂದರೆ - ಸಾಚಾಜಠರ (ಅಬೊಮೆಸಂ). ಈ ಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಜಠರಾಂತ್ಯಭಾಗದಲ್ಲಿ ಅನೇಕ ಸಣ್ಣಸಣ್ಣ ಪರಿಗಲಿತ ರೋಗ ವಿಕ್ಷತಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಸಾಚಾಜಠರದ ಮೇಲ್ಪರೆಯು ರಕ್ತಸ್ರಾವ ಮತ್ತು ರಕ್ತಾಧಿಕ್ಯತೆಯಿಂದ ಕೂಡಿದ್ದು ಅದೊಂದು ಪ್ರಧಾನ ರೋಗ ಲಕ್ಷಣವಾಗಿರುತ್ತದೆ.



ಚಿತ್ರ 5: ರೋಗಪೀಡಿತ ಸತ್ತಪ್ರಾಣಿಯ ಶವಪರೀಕ್ಷೆ ಸಾಜಜಠರದಲ್ಲಿ ವ್ರಣಗಳು ಹಾಗೂ ರಕ್ತ ಒಸರುವಿಕೆ

ಸಣ್ಣ ಕರುಳಿನಲ್ಲಿ ರೋಗ ವಿಕ್ಷತಿಗಳು ಕಂಡುಬರುವುದಾದರೂ, ಬಾಯಿ, ಸಾಚಾಜಠರ ಮತ್ತು ದೊಡ್ಡ ಕರುಳಿನಲ್ಲಿರುವುದಕ್ಕಿಂತಲೂ ಕಡಮೆ. ಸಣ್ಣ ಕರುಳಿನ

ಲೋಳ್ಪರೆ ರಕ್ತಸ್ರಾವಗಳಿಂದ ತುಂಬಿದ್ದು ಲೋಳ್ಪರೆ ಸ್ತರಗಳ ತುದಿಗಳ ಸವೆತ ಗಾಯಗಳಿಂದ ಕೂಡಿರುತ್ತವೆ. ಇಂತಹ ರೋಗ ವಿಕ್ಷತಿಗಳು ಮುರಿಗರುಳಿನ (ಈಲಿಯಂ) ಅಂತ್ಯಭಾಗದಲ್ಲಿ ಹೆಚ್ಚು. ದೊಡ್ಡರೋಗದಲ್ಲಿ ಹೆಚ್ಚು ಅಪಾಯಕ್ಕೊಳಗಾಗುವ



ಚಿತ್ರ 6: ಜೀಬ್ರಾ ಗುರುತುಗಳನ್ನು ತೋರಿಸುತ್ತಿರುವ ರೋಗಗ್ರಸ್ತ ಪಶುವಿನ ಕರುಳಿನ ಭಾಗಗಳು

ತರ ಕರುಳಿನ ಭಾಗವೆಂದರೆ ದೊಡ್ಡಕರುಳು. ಇದರಲ್ಲಿ ರೋಗ ವಿಕ್ಷತಿಗಳು ವಿಶೇಷ ಆಗಿ ಮುರಿಮೂಗುದುರಿನ ಕವಾಟ, (ಈಲಿಯೋಸೀಕಲ್ ವಾಲ್ವ್), ಮೂಗುರುಳು-ಗ್ಗರುಳ ಸಂಗಮ ಮತ್ತು ಗುದನಾಳ ಭಾಗಗಳಲ್ಲಿ ಕಂಡುಬರುತ್ತವೆ. ದೊಡ್ಡ ರುಳಿನ ಉದ್ದಕ್ಕೂ ಲೋಳ್ಪರೆಯು ಸ್ತರಗಳ ತುದಿಗಳು ಅನೇಕ ಸಣ್ಣ ಸಣ್ಣ ಪರಿಗಲಿತ ಹಾಗೂ ಕೊರೆತ ವಿಕ್ಷತಿಗಳಿಂದ ಕೂಡಿರುತ್ತವೆ. ಗುದನಾಳದ ಲೋಳ್ಪರೆಯು ಮೇಲಿನ ಉದ್ದ ದೊಡ್ಡ, ರಕ್ತಾಧಿಕ್ಯತೆಯ ಪಟ್ಟೆಗಳು ಜೀಬ್ರಾ ಪ್ರಾಣಿಯ ಮೈಮೇಲಿನ ಟ್ಟೆಗಳ ಸ್ವರೂಪವನ್ನು ಹೊಂದುತ್ತವೆ. ವಾಸ್ತವವಾಗಿ ಊತಕಸ್ತರದಲ್ಲಿರುವ ಲೋಮ ಳಗಳು ಕೆಂಪು ರಕ್ತಕಣಗಳಿಂದ ತುಂಬಿ, ನಾಳಗಳು ವಿಸ್ತರಿತವಾಗಿ ಉಬ್ಬಿ ಜೀಬ್ರಾ ಟ್ಟೆಗಳ ಚಿತ್ರವನ್ನು ಕೊಟ್ಟಿರುತ್ತವೆ.

ಸೂಕ್ಷ್ಮದಾರ್ಶನಿಕ ರೋಗ ವಿಕ್ಷತಿಗಳು: ಸಾಲ್ರಸದ ಊತಕ ಹಾಗೂ

ಜಠರ ಮತ್ತು ಕರುಳಿನ ಲೋಳ್ಪರೆಗಳಲ್ಲಿ ವಿಶಿಷ್ಟಾತ್ಮಕ ರೋಗವಿಕೃತಿಗಳು ಕಂಡು ಬರುತ್ತವೆ. ಇವುಗಳನ್ನು ಸೂಕ್ಷ್ಮದರ್ಶಿಯ ಮೂಲಕ ಮಾತ್ರ ಕಾಣಬಹುದು.

ಹಾಲ್ರಸದ ಊತಕಗಳಲ್ಲಿ : ಹಾಲ್ರಸಗಂಟು, ಪ್ಲೀಹ, ಪೇಯರಿನ ಮಚ್ಚೆಗಳಲ್ಲಿರುವ ಹಾಲ್ರಸಕಣಗಳು ನಾಶಹೊಂದಿರುತ್ತವೆ. ಸಾವಿನ ಆರಂಭದಲ್ಲಿ ಕಂಡು ಬರುವ ಮೊದಲ ಬದಲಾವಣೆಯೆಂದರೆ ಹಾಲ್ರಸಕಣಗಳಲ್ಲಿರುವ ಕೇಂದ್ರಕಗಳ (ನ್ಯೂಕ್ಲಿಯೈ) ತುಂಡರಿಕೆ ಆನಂತರ ಹಾಲ್ರಸಗಂಟುಗಳಲ್ಲಿರುವ ಜೀವಾಂಕುರ ಕೇಂದ್ರಗಳಿಂದ ಹಾಲ್ರಸಕಣಗಳು ಸಂಪೂರ್ಣವಾಗಿ ಮಾಯವಾಗುತ್ತವೆ. ಕೊನೆಗೆ ಅಲ್ಲಿ ಏಕಕೋಶಿಕ ಮಾತೃಕೆ (ಏಸೆಲ್ಯುಲಾರ್ ಮ್ಯಾಟ್ರಿಕ್ಸ್) ಮಾತ್ರ ಉಳಿದಿರುತ್ತದೆ. ಅಲ್ಲಿರುವ ಲೋಮನಾಳಗಳು ಅಧಿಕವಾಗಿ ರಕ್ತವೇರಿರುತ್ತವೆ.

ಜೀರ್ಣನಾಳದಲ್ಲಿ ವಿಶೇಷವಾಗಿ ಬಾಯಿ ಹಾಗೂ ಸಾಚಾ ಜಠರದ ಲೋಳ್ಪರೆಯಲ್ಲಿ ಹೆಚ್ಚು ಪ್ರಧಾನವಾಗಿ ಕಂಡುಬರುತ್ತವೆ. ಬಾಯಿಯ ಲೋಳ್ಪರೆಯಲ್ಲಿ ಆಳದಲ್ಲಿರುವ ಪದರಗಳು ಮೊದಲು ಸಾಯುತ್ತವೆ. ಆನಂತರ ಕ್ರಮೇಣ ಕೆಳಗಿನಿಂದ ಮೇಲಕ್ಕೆ ಒಂದೊಂದಾಗಿ ಪದರಗಳು ಸಾಯುತ್ತ ಬರುತ್ತವೆ. ಅಂತ್ಯದಲ್ಲಿ ಮೇಲ್ಭಾಗದ ಪದರವು ಸಾಯುತ್ತದೆ. ಸಾಚಾಜಠರದಲ್ಲಿ ವಿಶಿಷ್ಟ ರೀತಿಯ ಸೂಕ್ಷ್ಮ ಸತ್ತಾಂಗಾಂಶ ಬಿಂದುಗಳು ಪೈಲೊರಿಕ್ ಭಾಗದಲ್ಲಿ ಕಾಣಿಸುತ್ತವೆ. ಸಣ್ಣ ಕರುಳಿನಲ್ಲಿ ಪೇಯರಿನ ಮಚ್ಚೆಗಳು ವಿಶೇಷವಾಗಿ ಅಪಾಯಕ್ಕೊಳಗಾಗಿರುತ್ತವೆ. ಅಲ್ಲಿನ ಹಾಲ್ರಸದ ಊತಕಗಳು ಸತ್ತುಹೋಗಿರುತ್ತವೆ. ಮುರಿಮೂಗರಳಿನ ಭಾಗದ ಲೋಳ್ಪರೆಗಳಲ್ಲಿರುವ ಲೋಮನಾಳಗಳು ಅಧಿಕವಾಗಿ ರಕ್ತವೇರಿರುತ್ತವೆ.

7. ರೋಗನಿದಾನ

ರೋಗಗ್ರಸ್ತ ಪ್ರಾಣಿಗಳ ಪೂರ್ವಚರಿತ್ರೆ ಮತ್ತು ರೋಗಗ್ರಸ್ತ ಪ್ರಾಣಿಗಳು ತೋರಿಸುವ ರೋಗಲಕ್ಷಣಗಳಿಂದ ರೋಗನಿದಾನ ಮಾಡಬಹುದು. ಪ್ರಾಣಿಯ ಮಾಲೀಕನಿಂದ ಪಡೆಯುವ ವಿವರವು ಪಶುವೈದ್ಯನಿಗೆ ರೋಗನಿದಾನ ಕಾರ್ಯದಲ್ಲಿ ಹೆಚ್ಚು ನೆರವಾಗುತ್ತದೆ.

ರೋಗನಿದಾನದ ಎರಡನೆಯ ಭಾಗವೆಂದರೆ ರೋಗಲಕ್ಷಣಗಳು. ಅಂದರೆ, ಅಧಿಕ ಜ್ವರ, ನಾಲಿಗೆಯ ತಳಭಾಗ, ಕೆಳತುಟಿಯ ಭಾಗದಲ್ಲಿ ಹರಡಿದ ಗೋದಿ ಹೊಟ್ಟಿನ ದೃಶ್ಯವನ್ನು ಸೇರುವ ಸಣ್ಣ ಸಣ್ಣ ಬಿಂದು ರೂಪದ ಸಂಗಲಿತ ಹಾಗೂ ಸವೆತ ರೋಗ ವಿಕೃತಿಗಳು, ಬಿರುಸಿನ ಬೇಧಿ, ಬಾಯಿಂದ ರಕ್ತಮಿಶ್ರಿತ ಬುರುಗು ರೀತಿಯ ಜೊಲ್ಲು ಸುರಿಯುವಿಕೆ ಇವೇ ಮುಂತಾದುವುಗಳ ಅಧ್ಯಯನವು ದೊಡ್ಡರೋಗ ನಿದಾನ ಕಾರ್ಯದಲ್ಲಿ ಸಹಾಯವಾಗುತ್ತವೆ. ಅಲ್ಲದೆ ರೋಗದಿಂದ ಸತ್ತ ಪ್ರಾಣಿಗಳನ್ನು ಕೊಯ್ದು ಜಠರ, ಕರುಳು, ಭಾಗಗಳಲ್ಲಿರುವ ರೋಗವಿಕೃತಿಗಳನ್ನು ಪರಿಶೀಲಿಸುವುದರಿಂದಲೂ ದೊಡ್ಡರೋಗವನ್ನು ನಿದಾನಮಾಡಬಹುದು.

ದೃಢೀಕರಣ ನಿದಾನ: ರೋಗವನ್ನು ಸ್ಥಿರಪಡಿಸಲು ರೋಗಲಕ್ಷಣಗಳ ವೀಕ್ಷಣೆಯ ಜೊತೆಗೆ ರೋಗಗ್ರಸ್ತ ಪ್ರಾಣಿಗಳಿಂದ ವಿವಿಧ ವಸ್ತುಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಯೋಗಾಲಯಗಳಲ್ಲಿ ಪ್ರಾಯೋಗಿಕ ಪರೀಕ್ಷೆಗೊಳಪಡಿಸಿ ರೋಗ ದೃಢೀಕರಿಸುವುದು ಅತ್ಯಾವಶ್ಯಕ. ಉದಾಹರಣೆಗೆ, ಪ್ರಾಣಿಗಳಿಂದ ವಿಷಾಣುಗಳನ್ನು ಪ್ರತ್ಯೇಕಿಸುವುದು, ಪ್ರತಿಜನಕ ಹಾಗೂ ಪ್ರತಿವಸ್ತುಗಳನ್ನು ಕಂಡು ಹಿಡಿಯುವುದು ಮತ್ತು ರೋಗಗ್ರಾಹಕ ಪ್ರಾಣಿಗಳಿಗೆ, ರೋಗಗ್ರಸ್ತ ಪ್ರಾಣಿಗಳಿಂದ ಶೇಖರಿಸಿದ ವಸ್ತು ಅಥವಾ ವಿಷಾಣುಗಳನ್ನು ಕೊಟ್ಟು ಪರೀಕ್ಷೆ ನಡೆಸುವುದು ಇವೇ ಮುಂತಾದವು.

ಪ್ರಯೋಗಾಲಯಗಳಲ್ಲಿ ನಡೆಸುವ ರಕ್ತಸಾರದ ಪರೀಕ್ಷೆಗಳಿಗಾಗಿ ರೋಗಗ್ರಸ್ತ ಪ್ರಾಣಿಗಳಿಂದ ಹೆಪ್ಪುರೋಧಕಗಳನ್ನು ಸಿಟ್ರೇಟ್ ಸೇರಿಸಿದ ಪ್ರನಾಳಗಳಲ್ಲಿ, ರಕ್ತವನ್ನು ಮತ್ತು ಹಾಲ್ರಸಗಂಟು, ಪ್ಲೀಹ ಮುಂತಾದ ಅಂಗ ಭಾಗಗಳನ್ನು "ಗ್ಲಿಸರಾಲ್ ಸೆಲೈನ್"ನ ಶೀಶೆಗಳಲ್ಲಿ ಶೇಖರಿಸಿ ಸಮೀಪದ ಪ್ರಯೋಗಾಲಯಗಳಿಗೆ ಕಳುಹಿಸಿಕೊಡಬೇಕು. ರೋಗಗ್ರಸ್ತ ಪ್ರಾಣಿಗಳಲ್ಲಿ ಬೇಧಿ ಕಾಣಿಸಿಕೊಳ್ಳುವ ನಾಲ್ಕು ದಿನಗಳ ಮುಂಚಿತವಾಗಿ,

ಜ್ವರದ ಮೊದಲಲ್ಲಿ (ಜ್ವರದ ಮೊದಲ ನಾಲ್ಕು ದಿನಗಳೊಳಗೆ) ರಕ್ತವನ್ನು ಶೇಖರಿಸುವುದು ಉತ್ತಮ.

ಪ್ರತಿಜನಕಗಳ ಪತ್ತೆ: ದೊಡ್ಡರೋಗದ ಪ್ರಾಣಿಗಳಲ್ಲಿ ದೊಡ್ಡರೋಗವನ್ನು ದೃಢೀಕರಿಸಲು ಆ ಪ್ರಾಣಿಗಳಲ್ಲಿ ಪ್ರತಿಜನಕ ಅಥವಾ ವಿಷಾಣುಗಳನ್ನು ಪತ್ತೆ ಮಾಡುವಿಕೆ ಒಂದು ಉತ್ತಮ ಪರೀಕ್ಷೆ. ರೋಗಗ್ರಸ್ತ ಪ್ರಾಣಿಗಳಲ್ಲಿ ಪ್ರತಿಜನಕಗಳನ್ನು ಪತ್ತೆ ಮಾಡಲು ಪೂರಕ ಬಂಧನ ಪರೀಕ್ಷೆ ಮತ್ತು ಅಗಾರ್ ಜೆಲ್ ವಿಸರಣ (ಅಗಾರ್ ಜೆಲ್ ಡಿಫ್ಯೂಶನ್) ಪರೀಕ್ಷೆಗಳನ್ನು ನಡೆಸಬಹುದು. ಪ್ರತಿಜನಕಗಳ ಮೂಲಗಳಾಗಿ ರೋಗಗ್ರಸ್ತ ಪ್ರಾಣಿಗಳ ರಕ್ತ, ಹಾಲ್ರಸಗ್ರಂಥಿ ಮತ್ತು ಪ್ಲೀಹ ಭಾಗಗಳನ್ನು ಪರೀಕ್ಷೆಗೆ ಬಳಸಿಕೊಳ್ಳಬಹುದು.

ಪೂರಕ ಬಂಧನ ಪರೀಕ್ಷೆ: ಇದು ಅಗಾರ್ ಜೆಲ್ ಡಿಫ್ಯೂಶನ್ ಪರೀಕ್ಷೆಗಿಂತಲೂ ಹೆಚ್ಚು ನಿಖರವಾದ ಪರೀಕ್ಷೆ. ದೊಡ್ಡರೋಗದ ಪ್ರತಿವಸ್ತುಗಳನ್ನು ಕಂಡು ಹಿಡಿಯಲೂ ಈ ಪರೀಕ್ಷೆಯನ್ನು ನಡೆಸಬಹುದು. ಸೋಂಕುಪ್ರಾಣಿಗಳ ರಕ್ತ, ಹಾಲ್ರಸಗ್ರಂಥಿಗಳು ಹಾಗೂ ಸತ್ತ ಪ್ರಾಣಿಗಳಿಂದ ಪ್ಲೀಹವನ್ನು ಪ್ರತಿಜನಕಗಳ ಮೂಲಗಳಿಗಾಗಿ ಶೇಖರಿಸಿಕೊಂಡು, ಪರೀಕ್ಷೆಯಲ್ಲಿ ಉಪಯೋಗಿಸಿಕೊಳ್ಳಬಹುದು.

ಅಗಾರ್ ಜೆಲ್ ಡಿಫ್ಯೂಶನ್ ಪರೀಕ್ಷೆಯಲ್ಲಿ ಪ್ರತಿಜನಕದ ವಿಷಾಣು ಮೂಲಗಳಿಗಾಗಿ ದೊಡ್ಡರೋಗದಿಂದ ನರಳುತ್ತಿರುವ ಪ್ರಾಣಿಗಳಿಂದ, ಅವುಗಳಲ್ಲಿ ಜ್ವರವು ಅಧಿಕವಾಗಿರುವಾಗ (ಪರಮಾವಧಿಯನ್ನು ಮುಟ್ಟಿರುವಾಗ) ರಕ್ತ ಮತ್ತು ಹಾಲ್ರಸ ಗ್ರಂಥಿಗಳನ್ನೂ ಸತ್ತ ಪ್ರಾಣಿಗಳಿಂದ ಪ್ಲೀಹವನ್ನೂ ಶೇಖರಿಸಿ ಪ್ರಯೋಗದಲ್ಲಿ ಬಳಸಿಕೊಳ್ಳಬೇಕು. ಹಾಲ್ರಸಗ್ರಂಥಿ ಮತ್ತು ಪ್ಲೀಹ ಭಾಗಗಳನ್ನು ಚೆನ್ನಾಗಿ ಅರೆದು ಸಮರಸ ಮಾಡಿಕೊಳ್ಳಬೇಕು. ಪೆಟ್ರಿಡಿಷ್‌ಗಳಲ್ಲಿ ಅಗಾರ್ ಜೆಲ್ ತುಂಬಿಸಿ ಆ ಮಾಧ್ಯಮದಲ್ಲಿ 'ವೆಲ್'ಗಳನ್ನು ಮಾಡಿಕೊಳ್ಳಬೇಕು ಮಧ್ಯದ 'ವೆಲ್'ನಲ್ಲಿ ಗೊತ್ತಾದ, ದೊಡ್ಡರೋಗದ ಪ್ರತಿರಕ್ತಸಾರವನ್ನು ತುಂಬಿಸಬೇಕು. ಪರೀಕ್ಷಿಸಬೇಕಾದ ಪ್ರತಿಜನಕ ಮೂಲವಸ್ತುವನ್ನು ಹೊರ 'ವೆಲ್'ಗಳಲ್ಲಿ ಗೊತ್ತಾದ ದೊಡ್ಡರೋಗ ವಿಷಾಣುಗಳನ್ನು ತುಂಬಿಸಿದ ಎರಡು 'ವೆಲ್'ಗಳ ನಡುವೆ ಒಂದರಂತೆ ತುಂಬಿಸಬೇಕು. ನಂತರ ಈ ಪೆಟ್ರಿಡಿಷ್‌ಗಳನ್ನು ಪ್ರಯೋಗಾಲಯದ ಉಷ್ಣತೆಯಲ್ಲಿ, ಅಂದರೆ 37°Cನಲ್ಲಿ 1–3 ದಿನಗಳವರೆಗೆ ಇಟ್ಟು ಫಲಿತಾಂಶ ನೋಡಬೇಕು.

ಪ್ರತಿಜೀವವಸ್ತುಗಳ ಪತ್ತೆ: ರೋಗಗ್ರಸ್ತ ಪ್ರಾಣಿಗಳ ಶರೀರದಲ್ಲಿ (ರಕ್ತಸಾರದಲ್ಲಿ) ದೊಡ್ಡರೋಗದ ಪ್ರತಿಜೀವವಸ್ತುಗಳನ್ನು ಕಂಡುಹಿಡಿಯುವಿಕೆ

ಇವು. ಇವನ್ನು ಕಂಡುಹಿಡಿಯಲು ಪೋಸಲ್ಸ್ ಹಿಮಾಗ್ಲುಟಿನೇಷನ್ ಪರೀಕ್ಷೆ ಅಥವಾ ಪೂರಕ ಬಂಧನ ಪರೀಕ್ಷೆಗಳನ್ನು ನಡೆಸಬೇಕು.

ಅಡ್ಡ ರಕ್ಷಣ ಪರೀಕ್ಷೆ : ಈ ಪರೀಕ್ಷೆಯನ್ನು ಎರಡು ರೀತಿಯಲ್ಲಿ ಕೈಗೊಳ್ಳಬಹುದು.

(1) ದೊಡ್ಡರೋಗದ ಪ್ರತಿರಕ್ಷ ರಕ್ತಸಾರವನ್ನು ಗೊತ್ತಾದ ಪ್ರಮಾಣದಲ್ಲಿ ರೋಗ ಗ್ರಾಹಕ ಪ್ರಾಣಿಗಳಿಗೆ ಕೊಟ್ಟು, ಅವುಗಳನ್ನು ದೊಡ್ಡರೋಗದಿಂದ ರಕ್ಷಿಸಿ, ಅನಂತರ ದೊಡ್ಡರೋಗದ ವಿಷಾಣುಗಳನ್ನು ಕೊಟ್ಟು, ಪರೀಕ್ಷಿಸುವುದು. ದೊಡ್ಡರೋಗದಿಂದ ನರಳುತ್ತಿರುವ ಪ್ರಾಣಿಗಳಿಂದ, ವಿಷಾಣು ಶೇಖರಿಸಿ ದೊಡ್ಡರೋಗ ಪ್ರತಿರಕ್ಷ ರಕ್ತಸಾರವನ್ನು ಕೊಟ್ಟಿರುವ ಪ್ರಾಯೋಗಿಕ ಪ್ರಾಣಿಗಳಿಗೆ ಕೊಡಬೇಕಲ್ಲದೆ, ಪ್ರಯೋಗದ ಪ್ರತಿಫಲವನ್ನು ಸಮರ್ಥಿಸಿಕೊಳ್ಳಲು, ಪ್ರತಿರಕ್ಷ ರಕ್ತಸಾರವನ್ನು ಕೊಟ್ಟು ರಕ್ಷಿಸಿದ ಪ್ರಾಣಿಗಳಿಗೂ ಕೊಡಬೇಕು. ಪ್ರತಿರಕ್ಷ ರಕ್ತಸಾರದಿಂದ ರಕ್ಷಣೆ ಪಡೆದ ಪ್ರಾಣಿಗಳು ಬದುಕುತ್ತವೆ; ಉಳಿದವು ಸಾಯುತ್ತವೆ.

(2) ರೋಗಗ್ರಾಹಕ ಪ್ರಾಣಿಗಳಿಗೆ ದೊಡ್ಡರೋಗದ ಲಸಿಕೆ ಹಾಕಿ ಅನಂತರ ಅವುಗಳಿಗೆ ದೊಡ್ಡರೋಗ ವಿಷಾಣುಗಳನ್ನು ಕೊಡಬೇಕು. ರೋಗಗ್ರಾಹಕ ಪ್ರಾಣಿಗಳಿಗೆ ಮೊದಲು ದೊಡ್ಡರೋಗದ ಲಸಿಕೆ ಹಾಕಬೇಕು. ಸುಮಾರು ಮೂರು ನಾಲ್ಕು ವಾರಗಳ ತರುವಾಯ ದೊಡ್ಡರೋಗದಿಂದ ನರಳುತ್ತಿರುವ ಪ್ರಾಣಿಯಿಂದ ಶೇಖರಿಸಿದ ವಿಷಾಣುಗಳನ್ನು ಇವುಗಳಿಗೆ ಕೊಡಬೇಕು. ಲಸಿಕೆ ಹಾಕಿ ದೊಡ್ಡರೋಗದಿಂದ ರಕ್ಷಿಸಿದ ಪ್ರಾಣಿಗಳು ಬದುಕಿಕೊಳ್ಳುತ್ತವೆ. ಲಸಿಕೆ ಹಾಕದ ಪ್ರಾಣಿಗಳು ಸಾಯುತ್ತವೆ.

ತಾಳೆ ನಿಯಂತ್ರಕ ರಕ್ತಸಾರ ನಿಷ್ಪರಿಣಾಮಕಾರಕ ಪರೀಕ್ಷೆ: ಈ ಪ್ರಯೋಗದಲ್ಲಿ ಆರೋಗ್ಯದಿಂದಿರುವ ರೋಗಗ್ರಾಹಕ, ನೈಸರ್ಗಿಕ ಪೋಷಕಗಳು(ಉದಾ: ದನಗಳು) ಅಥವಾ ಪ್ರಾಯೋಗಿಕ ಪ್ರಾಣಿ (ಉದಾ: ಕರು, ಮೇಕೆ) ಗಳನ್ನು ಪ್ರಯೋಗಕ್ಕಾಗಿ ಆರಿಸಿಕೊಳ್ಳಬೇಕು. ಇವುಗಳನ್ನು ಸಮಾನ ಸಂಖ್ಯೆಯಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳಬೇಕು. ಮೊದಲನೆ ಗುಂಪನ್ನು ಪ್ರಯೋಗದ ಫಲಿತಾಂಶವನ್ನು ತಾಳೆ ನೋಡಲು, ಅವುಗಳಿಗೆ ಏನನ್ನೂ ಕೊಡದೆ ಆರೋಗ್ಯಕರವಾಗಿಯೇ ಉಳಿಸಿಕೊಳ್ಳಬೇಕು. ಇವು ತಾಳೆ ನಿಯಂತ್ರಕಗಳು.

ಎರಡನೆ ಗುಂಪಿಗೆ ದೊಡ್ಡರೋಗದಿಂದ ನರಳುತ್ತಿರುವ ಪ್ರಾಣಿಗಳಿಂದ ಶೇಖರಿಸಿದ ವಿಷಾಣುಗಳನ್ನು ಕೊಡಬೇಕು. ಮೂರನೆ ಗುಂಪಿಗೆ ದೊಡ್ಡರೋಗದ ವಿಷಾಣುಗಳು ಮತ್ತು ದೊಡ್ಡರೋಗದ ಪ್ರತಿರಕ್ಷ ರಕ್ತಸಾರದ ಮಿಶ್ರಣವನ್ನು ಕೊಡಬೇಕು.

ಎರಡನೆ ಗುಂಪಿಗೆ ನಿರ್ದಿಷ್ಟ ಪ್ರಮಾಣದಲ್ಲಿ ವಿಷಾಣುಗಳನ್ನು ಕೊಡಬೇಕು. ಮೂರನೆ ಗುಂಪಿಗೆ ನಿರ್ದಿಷ್ಟ ಪ್ರಮಾಣದ ವಿಷಾಣುಗಳನ್ನು ಹಾಗೂ ನಿರ್ದಿಷ್ಟ ಪ್ರಮಾಣದ ಪ್ರತಿರಕ್ಷ ರಕ್ತಸಾರವನ್ನು ಮಿಶ್ರಮಾಡಿ ಕೊಡಬೇಕು. ಆನಂತರ ಈ ಮೂರು ಗುಂಪುಗಳನ್ನು ಸ್ವಲ್ಪ ಕಾಲದವರೆಗೆ ಗಮನಿಸಬೇಕು. ಒಂದು ಮತ್ತು ಮೂರನೆಯ ಗುಂಪುಗಳು ಆರೋಗ್ಯಕರವಾಗಿಯೇ ಉಳಿಯುತ್ತವೆ. ಎರಡನೆ ಗುಂಪಿನ ಪ್ರಾಣಿಗಳಲ್ಲಿ ದೊಡ್ಡರೋಗದ ಲಕ್ಷಣಗಳು ಕಾಣಿಸಿಕೊಂಡು, ಅವು ಸಾಯುತ್ತವೆ.

8. ವಿಭೇದಾತ್ಮಕ ರೋಗನಿದಾನ

ದೊಡ್ಡರೋಗವನ್ನು ರೋಗಗ್ರಸ್ತ ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುವ ವಿಶಿಷ್ಟ ರೋಗಲಕ್ಷಣಗಳಿಂದ ಪತ್ತೆ ಮಾಡಬಹುದಾದರೂ, ದೊಡ್ಡರೋಗವಲ್ಲದ ಒಂದು ಅಥವಾ ಕೆಲವು ರೋಗಲಕ್ಷಣಗಳನ್ನು ತೋರಿಸುವ ಕೆಲವು ಇತರ ರೋಗಗಳು ರೋಗದ ಶೀಘ್ರ ರೋಗನಿದಾನಕ್ಕೆ ಅಡ್ಡಿಯಾಗುವುದುಂಟು. ಇವು ಪ್ರಾಣಿಗಳಲ್ಲಿ ದೊಡ್ಡ ರೋಗದ ರೋಗನಿದಾನವನ್ನು ಸಂಕೀರ್ಣಗೊಳಿಸುತ್ತವೆ. ಪರಿಣಾಮವಾಗಿ ಶೀಘ್ರ ರೋಗಚಿಕಿತ್ಸೆ ಮತ್ತು ಶೀಘ್ರ ರೋಗನಿರೋಧನಾ ಕ್ರಮಗಳನ್ನು ಅನುಸರಿಸಲು ವಿಳಂಬಕ್ಕೆ ಕಾರಣವಾಗುತ್ತದೆ. ಕಾಲುಬಾಯಿರೋಗ(ಗೆರಸಲು), ಬೊವೈನ್ ಮೆಲಿಗ್ನೆಂಟ್ ಕೆಟರ್, ಮ್ಯೂಕೋಸಲ್ ಡಿಸೀಸ್, ವೆಸಿಕ್ಯುಲರ್ ಸ್ಟೊಮಟೈಟಿಸ್ ಇವೇ ಅಂಥ ಕೆಲವು ರೋಗಗಳು. ಆದ್ದರಿಂದ ದೊಡ್ಡರೋಗವನ್ನು ಈ ಎಲ್ಲ ರೋಗಗಳಿಂದ ಬೇರ್ಪಡಿಸಿ ರೋಗನಿದಾನ ಮಾಡಬೇಕು. ಈ ರೋಗಗಳು ಅವುಗಳ ಕೆಲವು ರೋಗ ಲಕ್ಷಣಗಳಿಂದ ದೊಡ್ಡರೋಗವನ್ನು ಸಂಶಯಾಸ್ಪದಕ್ಕೆ ಎಡೆಮಾಡಿದರೂ, ದೊಡ್ಡ ರೋಗದ ವಿಶಿಷ್ಟ ರೋಗಲಕ್ಷಣಗಳನ್ನು ಹೊಂದಿರದೆಯೂ, ಇಲ್ಲವೆ ದೊಡ್ಡರೋಗದಲ್ಲಿ ಕಂಡುಬರದ ಹಾಗೂ ಆಯಾ ರೋಗಗಳಿಗೆ ಮಾತ್ರ ವಿಶೇಷವಾಗಿರುವ ಕೆಲವು ವಿಶಿಷ್ಟ ರೋಗಲಕ್ಷಣಗಳನ್ನು ಹೊಂದಿರುವುದರ ಮೂಲಕವೂ ಅವು ದೊಡ್ಡರೋಗ ದಿಂದ ವ್ಯತ್ಯಾಸವಾಗಿರುತ್ತವೆ. ಇವುಗಳ ವಿಭೇದಾತ್ಮಕ ರೋಗಲಕ್ಷಣಗಳನ್ನು ತಿಳಿಯುವುದು ಅವಶ್ಯಕ.

ಕಾಲುಬಾಯಿ ರೋಗ : ಇದೊಂದು ವಿಷಾಣುರೋಗ. ಇದರಲ್ಲಿಯೂ ಸಹ ರೋಗಗ್ರಸ್ತ ಪ್ರಾಣಿಗಳ ಬಾಯಲ್ಲಿ ರೋಗವಿಕ್ಷತಿಗಳು ಕಂಡುಬರುತ್ತವೆ. ದೊಡ್ಡ ರೋಗದ ರೋಗನಿದಾನವನ್ನು ಸಂಕೀರ್ಣಗೊಳಿಸುವ ರೋಗಲಕ್ಷಣಗಳು ಇವೇ. ಆದರೆ ಇವು ದೊಡ್ಡರೋಗದಲ್ಲಿ ಕಂಡುಬರುವ ಸವೆತ ಹಾಗೂ ವ್ರಣರೂಪದವುಗಳಲ್ಲ. ಇವು ನೀರ್ಗುಳ್ಳೆ ತೆರನವು. ಇವು ಗಾತ್ರದಲ್ಲಿ ದೊಡ್ಡವು ; ನಾಲಿಗೆಯ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಬಾಯಲ್ಲಿ ಕಾಣಿಸಿಕೊಳ್ಳುವುದರ ಜೊತೆಗೆ ಕಾಲು (ಪಾದಸೀಳುಗಳಲ್ಲಿ ಮತ್ತು ಗೊರಸಿನ ಮತ್ತು ಚರ್ಮ ಭಾಗದಲ್ಲಿ)ಗಳಲ್ಲಿಯೂ ಕಂಡು ಬರುತ್ತವೆ. ಇದರ ಪರಿಣಾಮವಾಗಿ ಕಾಲುಬಾಯಿರೋಗದ ಪ್ರಾಣಿಗಳು ಕುಂಟುತ್ತವೆ. ದೊಡ್ಡರೋಗದ ಪ್ರಾಣಿಗಳ ಕಾಲುಗಳಲ್ಲಿ ಈ ರೀತಿಯ ರೋಗವಿಕ್ಷತಿಗಳು ಕಂಡು ಬರುವುದಿಲ್ಲ. ಆದ್ದರಿಂದ ಅವು ಕುಂಟುವುದೂ ಇಲ್ಲ. ದೊಡ್ಡರೋಗದ ಯಾವ ಹಂತದಲ್ಲಿಯೂ ನೀರ್ಗುಳ್ಳೆಗಳು ಕಂಡುಬರುವುದಿಲ್ಲ. ದೊಡ್ಡರೋಗದ ಪ್ರಾಣಿಗಳಲ್ಲಿ

ಸಾವಿನ ಸಂಭವಗಳು ಅಧಿಕ. ಕಾಲುಬಾಯಿರೋಗದ ಪ್ರಾಣಿಗಳಲ್ಲಿ ಸಾವಿನ ಸಂಭವಗಳು ಕಡಿಮೆ. ದೊಡ್ಡರೋಗದಲ್ಲಿ ಬಿರುಸಿನ ಬೇಧಿ ಒಂದು ಪ್ರಮುಖ ರೋಗಲಕ್ಷಣ. ಕಾಲುಬಾಯಿರೋಗದಲ್ಲಿ ಬೇಧಿ ಅಪರೂಪ ಮತ್ತು ಅದು ಅಷ್ಟೊಂದು ಪ್ರಧಾನ ರೋಗಲಕ್ಷಣವಲ್ಲ.

ಬೊವೈನ್ ಮೆಲಿಗ್ನೆಂಟ್ ಕೆಟಾರ್: ಈ ರೋಗ ಬಂದಾಗ ಕಣ್ಣಿನಲ್ಲಿ ರೋಗ ವಿಕೃತಿಗಳು ಕಂಡು ಬರುತ್ತವೆ. ಮಿದುಳಿರಿತ ಹಾಗೂ ನರಸಂಬಂಧ ರೋಗ ಲಕ್ಷಣಗಳು ಕಂಡುಬರುತ್ತವೆ. ಪರಿಸರೀಯ ಹಾಲ್ರಸಗಂಟುಗಳು ಗಾತ್ರದಲ್ಲಿ ದೊಡ್ಡದಾಗುತ್ತವೆ. ಇವು ಈ ರೋಗದ ವಿಶಿಷ್ಟ ರೋಗಲಕ್ಷಣಗಳು. ಇವು ದೊಡ್ಡರೋಗದಲ್ಲಿ ಕಂಡು ಬರುವುದಿಲ್ಲ. ದೊಡ್ಡರೋಗದಲ್ಲಿ ಪ್ರಾಥಮಿಕವಾಗಿ ಜೀರ್ಣನಾಳದಲ್ಲಿ ಉರಿಯೂತ ವಿರುತ್ತದೆ. ಇದು ಈ ರೋಗದಲ್ಲಿ ಕಂಡು ಬರುವುದಿಲ್ಲ. ಈ ರೋಗವು ದೊಡ್ಡರೋಗ ದಷ್ಟು ತೀವ್ರವಾಗಿ ಹರಡುವುದಿಲ್ಲ. ಸಾವು ಕೂಡಾ ದೊಡ್ಡರೋಗದಷ್ಟಿರುವುದಿಲ್ಲ. ಈ ರೋಗವು ಅಲ್ಲಲ್ಲಿ ಕೆಲವು ಹಿಂಡುಗಳಲ್ಲಿ ವಿರಳವಾಗಿ ತಲೆದೋರುತ್ತದೆ. ದೊಡ್ಡ ರೋಗವು ಸಾಂಕ್ರಾಮಿಕ ರೀತಿಯಲ್ಲಿ ಹರಡುತ್ತದೆ.

ಮ್ಯೂಕೋಸಲ್ ಡಿಸೀಸ್ : ಬೇಧಿ ಮತ್ತು ಬಾಯಲ್ಲಿ ರೋಗವಿಕೃತಿಗಳು ಈ ರೋಗದ ವಿಶಿಷ್ಟ ರೋಗಲಕ್ಷಣಗಳು. ದೊಡ್ಡರೋಗದ ರೋಗ ನಿರ್ಣಯದಲ್ಲಿ ತೊಡಕಾಗುವ ರೋಗ ಲಕ್ಷಣಗಳು ಇವೇ. ಆದರೆ ಈ ರೋಗವು ಸಾಮಾನ್ಯವಾಗಿ ಪ್ರಾಣಿಗಳಲ್ಲಿ ಅಂದರೆ ಸುಮಾರು 6–14 ತಿಂಗಳ ಒಳಗಿನ ಪ್ರಾಣಿಗಳಲ್ಲಿ ಕಂಡುಬರುತ್ತದೆ. ಇದರ ರೋಗಸಂಭಾವ್ಯತೆ ಕಡಿಮೆ. ಮುಸುಡಿ, ತುಟಿ, ನಾಲಿಗೆ, ಒಸಡು, ಮೂಗಿನ ಹೊಳ್ಳೆ, ಮತ್ತು ಬಾಯಿಕುಳಿಗಳ ಲೋಳ್ಪರೆಯಲ್ಲಿ ಸವೆತ ಗಾಯಗಳು ಕಂಡುಬರುತ್ತವೆ. ಪರಿಗಲಿತ ರೋಗವಿಕೃತಿಗಳು ಇರುವುದಿಲ್ಲ. ದೊಡ್ಡರೋಗವು ಯಾವುದೇ ವಯಸ್ಸಿನ ಪ್ರಾಣಿಗಳಲ್ಲಿ ಬರಬಹುದು. ಇದರ ರೋಗಸಂಭಾವ್ಯತೆಯೂ ಹೆಚ್ಚು. ರೋಗಗ್ರಸ್ತ ಪ್ರಾಣಿಗಳ ಸಾವಿನ ಸಂಭವಗಳೂ ಹೆಚ್ಚು. ತುಟಿ, ಒಸಡು ಮತ್ತು ನಾಲಗೆಯ ತಳ ಭಾಗದ ಲೋಳ್ಪರೆಯಲ್ಲಿ ಪರಿಗಲಿತ ರೋಗವಿಕೃತಿಗಳು ಕಂಡುಬರುತ್ತವೆ. ಆರೋಗ್ಯ ವಿಕೃತಿಗಳ ಮೇಲೆ ಗೋದಿ ಹೊಟ್ಟಿನಂತಹ ವಸ್ತು ಮುಚ್ಚಿರುತ್ತದೆ. ಮ್ಯೂಕೋಸಲ್ ಡಿಸೀಸಿನಲ್ಲಿ ಬೇಧಿ ಒಂದು ಪ್ರಮುಖ ರೋಗ ಲಕ್ಷಣ. ದೊಡ್ಡರೋಗದಲ್ಲಿ ಮೊದಲು ಮಲಬದ್ಧತೆ ಇರುತ್ತದೆ. ಜ್ವರ ಕಾಣಿಸಿಕೊಂಡು ಕ್ರಮೇಣ ಹೆಚ್ಚಾಗಿ 3ರಿಂದ 5ನೆಯ ದಿನದಲ್ಲಿ ವಿಪರೀತವಾಗಿ, ಜ್ವರ ಇಳಿಯತೊಡಗಿದಾಗ ಬೇಧಿ ಕಾಣಿಸಿಕೊಳ್ಳುತ್ತದೆ.

ವೆಸಿಕ್ಯುಲಾರ್ ಸ್ಟೊಮಟೈಟಸ್ : ಇದು ಒಂದು ವಿಷಾಣುರೋಗ. ಈ ರೋಗದಲ್ಲಿ ಕಂಡುಬರುವ ರೋಗ ವಿಕೃತಿಗಳು ನೀರ್ಗುಳ್ಳೆ ತೆರನಾಗಿರುತ್ತವೆ. ಲೋಳ್ಪರೆಯ ಕೋಶಿಕೆಗಳಲ್ಲಿ ನೀರುತುಂಬಿ, ಅವು ಅನುವಳಿಕೆಹೊಂದಿ ವ್ರಣಗಳಾಗು

ತ್ತವೆ. ದೊಡ್ಡರೋಗದಲ್ಲಿರುವಂತೆ ಇದರಲ್ಲಿ ಪರಿಗಲಿತ ರೋಗ ವಿಕೃತಿಗಳಿರುವುದಿಲ್ಲ. ವಾಸ್ತವವಾಗಿ ರೋಗಗ್ರಸ್ತ ಪ್ರಾಣಿಗಳನ್ನು ಪರೀಕ್ಷಿಸಿದಾಗ ಸೀಗುಳ್ಳೆಗಳನ್ನು ಕಾಣುವುದು ಕಷ್ಟ. ಇವು ಒಡೆದು ವ್ರಣಗಳು ಮಾತ್ರವೇ ಕಾಣಿಸಿಕೊಳ್ಳುತ್ತವೆ. ಕಾರಣ ಪ್ರಾಣಿಗಳು ಬಾಯಲ್ಲಿ ನಾಲಿಗೆಯಾಡಿಸುತ್ತಿರುವಾಗ ಸುಲಭವಾಗಿ ಸೀಗುಳ್ಳೆಗಳು ಒಡೆದಿರುತ್ತವೆ. ಬಾಯಲ್ಲಿ ಮಾತ್ರವೇ ಅಲ್ಲದೆ ಕಾಲು(ಪಾದ)ಗಳ ಮೇಲೂ ರೋಗ ವಿಕೃತಿಗಳು ಕಂಡುಬರುತ್ತವೆ. ರೋಗಸಂಭಾವ್ಯತೆಗಳು ಕಡಮೆ. ರೋಗವ್ಯಾಪನೆ ಕಡಮೆ. ಸಾಮಾನ್ಯವಾಗಿ ಸಾವು ಇರುವು[illegible]

೧. ಚಿಕಿತ್ಸೆ

ಸಾಮಾನ್ಯವಾಗಿ ದೊಡ್ಡರೋಗದಿಂದ ನರಳುತ್ತಿರುವ ಪ್ರಾಣಿಗಳಲ್ಲಿ ಚಿಕಿತ್ಸೆ ನಿಷ್ಪ್ರಯೋಜಕ. ಆದರೂ ಪ್ರಾರಂಭದಲ್ಲಿಯೇ ಈ ಪ್ರಾಣಿಗಳಲ್ಲಿನ ರೋಗವನ್ನು ಗುರುತಿಸಿ ದೊಡ್ಡರೋಗ ಪ್ರತಿರೋಧ ರಕ್ತಸಾರವನ್ನು ಅಧಿಕ ಪ್ರಮಾಣದಲ್ಲಿ ರೋಗ ಗ್ರಸ್ತ ಹಾಗೂ ಸಂಶಯಾತ್ಮಕ ಪ್ರಾಣಿಗಳಿಗೆ ಕೊಟ್ಟು ಅವುಗಳನ್ನು ಸಾವಿನ ದವಡೆ ಯಿಂದ ರಕ್ಷಿಸಬಹುದು. ಪ್ರತಿರೋಧ ರಕ್ತಸಾರವನ್ನು ಸರಿಯಾದ ಕಾಲದಲ್ಲಿ ಅಂದರೆ ಜ್ವರ ಕಾಣಿಸಿಕೊಂಡ ಒಂದೆರಡು ದಿನಗಳಲ್ಲಿ ಅವುಗಳಿಗೆ ಚರ್ಮದಡಿ ಮಾರ್ಗವಾಗಿಯೂ ಶಿರನಾಳದ ಮೂಲಕ ಅಧಿಕ ಪ್ರಮಾಣದಲ್ಲಿ(200-500ಸಿಸಿ) ಇದನ್ನು ಕೊಡುವುದು ಅವಶ್ಯಕ. ರೋಗವು ಇನ್ನೂ ಪ್ರಾರಂಭದ ಹಂತದಲ್ಲಿಯೇ ಇರುವಾಗ ಚಿಕಿತ್ಸೆಯ ಪ್ರಯತ್ನವು ಯಶಸ್ವಿಯಾಗುವುದು. ಆದರೆ ಆರಂಭದಲ್ಲಿಯೇ ರೋಗನಿದಾನ ಮಾಡು ವುದು ಅವಶ್ಯಕ. ಬೇಧಿಯಿಂದಾಗಿ ನಷ್ಟವಾಗುವ ದೇಹದ್ರವವನ್ನು ತುಂಬಲು ಸಾಕಷ್ಟು ಪ್ರಮಾಣದಲ್ಲಿ ವಿದ್ಯುದ್ವಿಶ್ಲೇಷ್ಯದ್ರಾವಕ(ಎಲೆಕ್ಟ್ರೋಲೈಟ್ ಸಲ್ಯೂಶನ್) ಅಥವಾ ಗ್ಲೂಕೋಸ್ ಸೆಲೈಸ್ ರಕ್ತನಾಳ(ಶಿರನಾಳ) ಮಾರ್ಗವಾಗಿ ಕೊಡಬೇಕು. ಇತರ ದ್ವಿತೀಯಕ ಸೋಂಕುಗಳನ್ನು ತಡೆಗಟ್ಟಲು ಪ್ರತಿ ಜೀವಕಗಳನ್ನು ಮತ್ತು ಸಲ್ಫಾ ಔಷಧಿಗಳನ್ನು ಕೊಡಬೇಕು.

10. ರೋಗನಿಯಂತ್ರಣ

ದೊಡ್ಡರೋಗವು ಸಂಪೂರ್ಣವಾಗಿ ನಿವಾರಣೆಗೊಳಿಸಬಹುದಾದ ರೋಗಗಳಲ್ಲಿ ಒಂದು. ಇದರ ನಿವಾರಣೆಯು ಅಷ್ಟೇ ಸುಲಭ; ಆದರೆ ಅಷ್ಟೇ ಕಷ್ಟವೂ ಕೂಡ. ಸದಾ ಸಾಕುಪ್ರಾಣಿ ಸಮುದಾಯದಲ್ಲಿ ಒಂದಲ್ಲ ಒಂದುಕಡೆ, ಆಗಾಗ್ಯೆ ತಲೆದೋರುತ್ತಿರುವ ದೊಡ್ಡರೋಗಕ್ಕೆ ಪರಿಣಾಮಕಾರಿ ರೋಗ ನಿವಾರಣಾಕ್ರಮಗಳನ್ನು ಕೈಕೊಳ್ಳುವುದು ಅವಶ್ಯವಿದೆ. ರೋಗ ಸಂಪೂರ್ಣ ನಿವಾರಣೆಗೆ ಸಾಕಷ್ಟು ಪಶುವೈದ್ಯಕೀಯರ ನೆರವು, ಸೂಕ್ತ ಅನುಕೂಲಗಳು, ಆರಂಭದಲ್ಲೇ ರೋಗನಿದಾನ ಮತ್ತು ರೋಗಮೂಲಗಳಾದ ವನ್ಯಪ್ರಾಣಿಗಳ ನಿಯಂತ್ರಣೆ ಅವಶ್ಯಕ.

ರೋಗ ನಿಯಂತ್ರಣೆಯ ಕೆಲವು ಮುಖ್ಯ ಕ್ರಮಗಳು : ದೊಡ್ಡರೋಗ ನಿಯಂತ್ರಣೆಯಲ್ಲಿ ಈ ಕೆಳಗಿನ ನಿಯಂತ್ರಣಾ ಕ್ರಮಗಳನ್ನು ಅನುಸರಿಸಬೇಕು :

1) ರೋಗಗ್ರಸ್ತ ಹಾಗೂ ಸಂಶಯಾತ್ಮಕ ಪ್ರಾಣಿಗಳ ಚಿಕಿತ್ಸೆ ಅಥವಾ ವಧೆ.

2) ದೊಡ್ಡರೋಗದಿಂದ ಸತ್ತ ಪ್ರಾಣಿಗಳ ಸೂಕ್ತ ವಿಲೇವಾರಿ.

3) ಸೂಕ್ತ ಸೋಂಕುನಾಶಕಗಳಿಂದ ಸೋಂಕು ಪದಾರ್ಥಗಳನ್ನು, ಸೋಂಕುಳ್ಳ ನುಯ ಪ್ರದೇಶಗಳನ್ನು, ನಿರ್ಜೀವಾಣುಗೊಳಿಸುವಿಕೆ.

4) ವನ್ಯಪ್ರಾಣಿಗಳಲ್ಲಿ ರೋಗನಿಯಂತ್ರಣೆ ಮತ್ತು ಅವುಗಳಿಂದ ಸಾಕು ಪ್ರಾಣಿಗಳಿಗೆ ಸೋಂಕು ಹರಡದಂತೆ ಸೂಕ್ತ ಕ್ರಮಗಳ ಪಾಲನೆ.

5) ರೋಗಗ್ರಸ್ತ ಪ್ರಾಣಿಗಳ ಮತ್ತು ಸೋಂಕು ಪದಾರ್ಥಗಳ ಸಂಚಾರ ಹಾಗೂ ಸಾಗಾಟಗಳ ನಿಯಂತ್ರಣ.

6) ರೋಗಗ್ರಾಹಕ ಪ್ರಾಣಿಗಳಲ್ಲಿ ರೋಗ ನಿರೋಧನಾ ಶಕ್ತಿಯನ್ನು ತುಂಬುವಿಕೆ ಅಥವಾ ಸೂಕ್ತ ವ್ಯಾಕ್ಸಿನೇಷನ್ ಕ್ರಮಗಳ ಪಾಲನೆ.

(1) **ರೋಗಗ್ರಸ್ತ ಹಾಗೂ ಸಂಶಯಾತ್ಮಕ ಪ್ರಾಣಿಗಳ ಚಿಕಿತ್ಸೆ ಅಥವಾ ವಧೆ :** ದೊಡ್ಡರೋಗದ ರೋಗೋದ್ರೇಕವು ಯಾವುದೇ ಒಂದು ಪ್ರದೇಶದಲ್ಲಿ ತಲೆದೋರಿದ ಕೂಡಲೇ, ಆರಂಭದಲ್ಲಿಯೇ ರೋಗಕ್ಕೀಡಾದ ಪ್ರಾಣಿಗಳಿಗೆ ಪ್ರತಿಜೀವಕ ಹಾಗೂ ಸಲ್ಫಾ ಔಷಧಿಗಳಿಂದ ಚಿಕಿತ್ಸೆ ನೀಡಬೇಕು. ರೋಗಗ್ರಸ್ತ ಪ್ರಾಣಿಗಳಿಗೆ ಅತಿ

ಪ್ರತಿರೋಧ ರಕ್ತವನ್ನು ರಕ್ತನಾಳಗಳ ಮೂಲಕ ಕೊಡಬೇಕು. ಸಂಶಯ ಬಂದ ಇತರ ಪ್ರಾಣಿಗಳಿಗೂ ಸಹ ಇದೇ ರೀತಿಯ ಚಿಕಿತ್ಸೆ ನೀಡುವುದು ಅವಶ್ಯಕ. ದೊಡ್ಡ ರೋಗಗ್ರಸ್ತ ಪ್ರಾಣಿಗಳನ್ನು ಸಾಯಿಸುವುದೇ ಒಳ್ಳೆಯದು. ಪ್ರಗತಿಪರ ದೇಶಗಳು ಇದೇ ಕ್ರಮವನ್ನು ಅನುಸರಿಸಿ ದೊಡ್ಡರೋಗ ನಿಯಂತ್ರಣಾಕಾರ್ಯದಲ್ಲಿ ಯಶಸ್ವಿಯಾಗಿವೆ. ದೊಡ್ಡರೋಗದ ಹರಡುವಿಕೆ ಹಾಗೂ ಸಂಭವನೀಯ ನಷ್ಟಗಳಿಗೆ ಹೋಲಿಸಿ ನೋಡಿದರೆ ರೋಗ್ರಸ್ತ ಪ್ರಾಣಿಗಳನ್ನು ಸಾಯಿಸುವುದೇ ಲಾಭದಾಯಕ. ಅದರಲ್ಲೂ ವಿಶೇಷವಾಗಿ, ಬಹುಕಾಲದಿಂದಲೂ ದೊಡ್ಡರೋಗದಿಂದ ವಿಮುಕ್ತಗೊಂಡಿರುವ ಅಥವಾ ಅದೇ ಪ್ರಪ್ರಥಮವಾಗಿ ರೋಗ ಕಾಣಿಸಿಕೊಂಡ ಪ್ರದೇಶಗಳಲ್ಲಿ ಸೋಂಕು ಪ್ರಾಣಿಗಳು ಹಾಗೂ ಸಂಶಯಾತ್ಮಕ ಪ್ರಾಣಿಗಳನ್ನು ಪ್ರತ್ಯೇಕಿಸಿ, ಸಾಯಿಸಿ, ಸೂಕ್ತರೀತಿಯಲ್ಲಿ ಅವುಗಳ ವಿಲೇವಾರಿ ಮಾಡಬೇಕು. ಎಲ್ಲ ಆರೋಗ್ಯಕರ ಪ್ರಾಣಿಗಳಿಗೂ ಸಾಮೂಹಿಕವಾಗಿ ರೋಗ ನಿರೋಧಕ ಲಸಿಕೆ ಹಾಕಬೇಕು.

(2) **ದೊಡ್ಡರೋಗದಿಂದ ಸತ್ತಪ್ರಾಣಿಗಳ ವಿಲೇವಾರಿ :** ದೊಡ್ಡರೋಗದಿಂದ ಸತ್ತ ಪ್ರಾಣಿಗಳ ಸೂಕ್ತ ವಿಲೇವಾರಿ ಹೆಚ್ಚು ಗಮನಾರ್ಹವಾದ ವಿಷಯ. ದೊಡ್ಡರೋಗದಿಂದ ಸತ್ತ ಪ್ರಾಣಿಗಳನ್ನು ಬಂಡಿಗಳಲ್ಲಿ ದೂರಸಾಗಿಸಿ ಆಳವಾಗಿ ತೋಡಿದ ಹಳ್ಳಗಳಲ್ಲಿ ಹೂಳಬೇಕು ಅಥವಾ ಚೆನ್ನಾಗಿ ಸುಡಬೇಕು. ಯಾವುದೇ ರೀತಿಯಲ್ಲಿ ಪ್ರಾಣಿಶವಗಳು ಹೂತಜಾಗದಿಂದ ಹೊರಬರದಂತೆ, ಅಂದರೆ ನೀರು ಕೊಚ್ಚಿಕೊಂಡು ಬರುವುದರಿಂದಲೂ ಇಲ್ಲವೇ ನಾಯಿಗಳು ಹಾಗೂ ಕಾಡುಪ್ರಾಣಿಗಳು ಅವುಗಳನ್ನು ಹಳ್ಳಗಳಿಂದ ಎಳೆದು ಹಾಕುವುದರಿಂದಲೂ ಪ್ರಾಣಿಶವಗಳು ಹಳ್ಳಗಳಿಂದ ಹೊರಗೆ ಬರದಂತೆ ಜಾಗ್ರತೆ ವಹಿಸಬೇಕು. ಮೇಲಾಗಿ ಪ್ರಾಣಿಶವಗಳ ಮೇಲೆ ಪರಿಣಾಮಕಾರಿ ಸೋಂಕು ನಿವಾರಕ ದ್ರವಗಳನ್ನು ಚಿಮುಕಿಸಬೇಕು. ದೊಡ್ಡರೋಗದಿಂದ ಸತ್ತ ಪ್ರಾಣಿಗಳನ್ನು ಸೂಕ್ತರೀತಿಯಲ್ಲಿ ವಿಲೇವಾರಿ ಮಾಡದೆ ಹೋದಲ್ಲಿ ರೋಗ ನಿಯಂತ್ರಣೆ ಮಾಡದೆ ಅದನ್ನು ಹರಡಿಸಿದಂತಾಗುತ್ತದೆ.

(3) **ಸೂಕ್ತ ಸೋಂಕು ನಾಶಕಗಳಿಂದ ಸೋಂಕು ಪದಾರ್ಥಗಳನ್ನು, ಸೋಂಕುಮಯ ಪ್ರದೇಶಗಳನ್ನು ನಿರ್ಜೀವಾಣುಗೊಳಿಸುವಿಕೆ :** ಫಾರ್ಮಲಿನ್, ಫಿನೈಲ್ ಇವೇ ಮುಂತಾದ ಸೋಂಕುನಾಶಕಗಳನ್ನು ಕೊಟ್ಟಿಗೆ ಹಾಗೂ ಫಾರ್ಮಗಳಲ್ಲಿ ಚಿಮುಕಿಸಬೇಕು. ಅಲ್ಲದೆ ಸೋಂಕು ಪ್ರಾಣಿಗಳನ್ನು ಕಟ್ಟಿರುವ ಸ್ಥಳಗಳಲ್ಲಿಯೂ, ಕೊಟ್ಟಿಗೆಯಲ್ಲಿರುವ ಹುಲ್ಲು, ಬಂಡಿ ಹಾಗೂ ಉಪಕರಣಗಳ ಮೇಲೂ ಸೋಂಕು ನಾಶಕ ಔಷಧಿಗಳನ್ನು ಚಿಮುಕಿಸಬೇಕು. ಕೊಟ್ಟಿಗೆಯಲ್ಲಿ ಸೋಂಕು ಪ್ರಾಣಿಗಳಿಗೆ ಮೇಯಲು ಹಾಕಿರುವ ಹುಲ್ಲನ್ನು ಹಾಗೂ ಅವುಗಳ ತಳಕ್ಕೆ ಹಾಕಿರುವ ಹುಲ್ಲನ್ನೂ ಸುಡಬೇಕು.

(4) **ವನ್ಯ ಪ್ರಾಣಿಗಳಿಂದ ಸಾಕುಪ್ರಾಣಿಗಳಿಗೆ ಸೋಂಕು ಹರಡದಂತೆ ಸೂಕ್ತ ಕ್ರಮಪಾಲನೆ:** ವನ್ಯಪ್ರಾಣಿಗಳಲ್ಲಿ ಸೋಂಕು ನಿಯಂತ್ರಣಾ ಕಾರ್ಯವು ಸ್ವಲ್ಪ ಕಷ್ಟಸಾಧ್ಯವೇ ಆದ್ದರಿಂದ ವನ್ಯಪ್ರಾಣಿಗಳಿಂದ ಸಾಕು ಪ್ರಾಣಿಗಳಿಗೆ ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವುದೊಂದೇ ಉಳಿದಿರುವ ಮಾರ್ಗ. ಅದಕ್ಕಾಗಿ ಕಾಡಿಗೆ ಸಮೀಪದಲ್ಲಿರುವ ಮತ್ತು ಸುತ್ತಮುತ್ತಲಿನ ಪ್ರಾಣಿಗಳಲ್ಲಿ ರೋಗೋದ್ರೇಕಗಳಾಗದಂತೆ, ಮೂಲದಲ್ಲಿಯೇ ಕಾಡಿನ ಸುತ್ತಲೂ ಪ್ರತಿರೋಧ ರಕ್ಷಿತ ಎಲ್ಲೆಯನ್ನು ನಿರ್ಮಿಸಬೇಕು. ಆ ಪ್ರದೇಶದಲ್ಲಿರುವ ಎಲ್ಲ ರೋಗಗ್ರಾಹಕ ಪ್ರಾಣಿಗಳಿಗೂ ವ್ಯಾಕ್ಸಿನೇಷನ್ ಮಾಡಬೇಕು ಮತ್ತು ಈ ಕ್ರಮವನ್ನು ಪ್ರತಿವರ್ಷವೂ ಅನುಸರಿಸಬೇಕು. ಮೃಗಾಲಯಗಳಿಗೆ ವನ್ಯಪ್ರಾಣಿಗಳನ್ನು ಹಿಡಿದು ತರುವಾಗ ಅಥವಾ ಇತರ ದೇಶಗಳಿಂದ ಆಮದುಮಾಡಿಕೊಳ್ಳುವಾಗ ಪ್ರಾಣಿಗಳನ್ನು ಕೆಲವು ದಿನಗಳವರೆಗೆ ಪ್ರತ್ಯೇಕಿಸಿಡಬೇಕು. ಮೃಗಾಲಯದ ಪ್ರಾಣಿಗಳಿಗೆಲ್ಲ ವ್ಯಾಕ್ಸಿನೇಷನ್ ಮಾಡಬೇಕು.

(5) **ರೋಗಗ್ರಸ್ತ ಪ್ರಾಣಿಗಳ ಮತ್ತು ಸೋಂಕುಪದಾರ್ಥಗಳ ಸಂಚಾರ ಹಾಗೂ ಸಾಗಾಟಗಳ ನಿಯಂತ್ರಣ:** ಸೋಂಕು ಪ್ರಾಣಿಗಳ ಸಂಚಾರ ಹಾಗೂ ಅವುಗಳ ಆಮದು, ರಫ್ತಿನ ವ್ಯವಹಾರವು ರೋಗಪ್ರಸಾರಕ್ಕೆ ಮುಖ್ಯ ಕಾರಣಗಳಾದ್ದರಿಂದ ಈ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕಾದುದು ಅವಶ್ಯಕ. ಸೋಂಕಿನ ವರದಿ ಇರುವ ಪ್ರದೇಶಗಳಿಂದ ಪ್ರಾಣಿಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು. ಬೇರೆ ದೇಶ ಅಥವಾ ಸ್ಥಳಗಳಿಂದ ಪ್ರಾಣಿಗಳನ್ನು ಆಮದು ಮಾಡಿಕೊಳ್ಳುವಾಗ ಅವುಗಳ ಹಾಗೂ ಅವುಗಳಿಗಿರುವ ಆ ಪ್ರದೇಶದ ರೋಗ ಪರಿಸ್ಥಿತಿಯ ಬಗ್ಗೆ ಅರಿಯುವುದು ಮಾತ್ರವಲ್ಲದೆ ಅವುಗಳನ್ನು ತರಿಸಿಕೊಂಡ ಮೇಲೆ ಕೆಲವು ದಿನಗಳವರೆಗೆ ಪ್ರತ್ಯೇಕವಾಗಿ ಇಟ್ಟಿರುವುದು ಅವಶ್ಯಕ. ಅಲ್ಲದೆ ನಾಡಿನ ಒಳಭಾಗಗಳಲ್ಲೂ ಪ್ರಾಣಿಗಳು ಅನಧಿಕೃತವಾಗಿ ತಡೆಯಿಲ್ಲದೆ ಸಂಚಾರ ಮಾಡುವುದನ್ನು ತಡೆಯಬೇಕು. ಒಂದು ಪ್ರದೇಶದಲ್ಲಿ ರೋಗೋದ್ರೇಕವಾಗಿ ಆ ಪ್ರದೇಶವನ್ನು 'ಸೋಂಕು ಪ್ರದೇಶ' ವೆಂದು ಘೋಷಿಸಿ, ಅಲ್ಲಿನ ಪ್ರಾಣಿಗಳನ್ನು ನಿರ್ಬಂಧದಲ್ಲಿಡಬೇಕು ಮತ್ತು ಆ ಪ್ರದೇಶದ ಸುತ್ತಲೂ ಇರುವ ಪ್ರಾಣಿಗಳಿಗೆಲ್ಲ ವ್ಯಾಕ್ಸಿನೇಷನ್ ಮಾಡಿ, ಪ್ರತಿರೋಧರಕ್ಷಿತ ಎಲ್ಲೆಯನ್ನು ನಿರ್ಮಿಸಬೇಕು.

ಚರ್ಮ, ಮಾಂಸ ಮತ್ತು ಇತರ ವಸ್ತುಗಳನ್ನು ಆಮದು ಮಾಡಿಕೊಳ್ಳುವಾಗ ಸಂಸ್ಕರಿಸಿದ ವಸ್ತುಗಳನ್ನೇ ಆಮದು ಮಾಡಿಕೊಳ್ಳುವುದು ಒಳ್ಳೆಯದು.

ಪ್ರಾಣಿ ಸಂಚಾರದ ನಿಯಂತ್ರಣೆ ಮತ್ತು ರೋಗನಿಯಂತ್ರಣಾ ಕಾರ್ಯವು ಯಶಸ್ವಿಯಾಗಲು ಸೂಕ್ತ ಕಾನೂನಿನ ಅವಶ್ಯಕತೆ ಅತ್ಯಗತ್ಯ.

ವಿಶ್ವದಾದ್ಯಂತ, ಅನೇಕವೇಳೆ ವಿವಿಧ ಸಂಸ್ಥೆಗಳು, ಸಭೆಗಳು, ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ದೊಡ್ಡರೋಗದ ನಿವಾರಣಾ ಕ್ರಮಗಳನ್ನು ಕುರಿತು ಚರ್ಚಿಸಿವೆ. ಕ್ರಿ.ಶ. 1971ರಲ್ಲಿ ಓ.ಐ.ಇ ಮತ್ತು ಎಫ್.ಎ.ಓ.ಗಳು ಪ್ಯಾರಿಸ್‌ನಲ್ಲಿ ದೊಡ್ಡರೋಗದಿಂದುಂಟಾದ ಗಂಭೀರ ಪರಿಸ್ಥಿತಿಯ ಕಾರಣದಿಂದಾಗಿ ತುರ್ತು ಸಭೆ ಸೇರಿ ವಿವಿಧ ರೋಗನಿವಾರಣಾ ಕ್ರಮಗಳನ್ನು ಸೂಚಿಸಿದವು.[13] ಆ ಕ್ರಮದಲ್ಲಿ ರೋಗಪೀಡಿತ ಪ್ರದೇಶಗಳಲ್ಲಿನ ಸೋಂಕಿನ ನಿವಾರಣೆ ಮಾತ್ರವಲ್ಲದೆ ಮುಖ್ಯವಾಗಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಆಗುತ್ತಿರುವ ರೋಗಪ್ರಸಾರವನ್ನು ಕಡಮೆ ಮಾಡುವುದೂ ಒಳಗೊಂಡಿತ್ತು. ಆ ಸೂಚನೆಗಳು ಯಾವುವೆಂದರೆ :- (ಅ) ಯಾವುದೇ ದೇಶದಲ್ಲಿ ಹೊಸಹೊಸ ರೋಗೋದ್ರೇಕಗಳು ಕಂಡುಬಂದರೂ ಆ ದೇಶವು ಓ.ಐ.ಇ. ಮತ್ತು ಎಫ್.ಎ.ಓ.ಗಳಿಗೆ ಆ ವಿಷಯವನ್ನು ವರದಿ ಮಾಡುತ್ತಿರಬೇಕು. (ಆ) ರೋಗಪೀಡಿತ ಪ್ರದೇಶಗಳಲ್ಲಿನ ಪ್ರಾಣಿಗಳ ಸಂಚಾರ ಹಾಗೂ ಅವುಗಳ ಪದಾರ್ಥಗಳ ಸಾಗಾಟಗಳನ್ನು ನಿಕೃಷ್ಟವಾಗಿ ನಿಯಂತ್ರಿಸಬೇಕು ಮತ್ತು ಅಂಥ ಪ್ರಾಣಿಗಳನ್ನು, ವಸ್ತುಗಳನ್ನು ಸಾಗಿಸಲು ಉಪಯೋಗಿಸುವ ವಾಹನಗಳನ್ನು ಪರಿಣಾಮಕಾರಿ ಸೋಂಕು ನಿವಾರಕಗಳಿಂದ ತೊಳೆಯಬೇಕು. (ಇ) ರೋಗನಿರ್ಣಯ(ನಿದಾನ)ಕಾರ್ಯಗಳಿಗೆ ಪ್ರಯೋಗಾಲಯಗಳ ಅನುಕೂಲಗಳು ಲಭ್ಯವಿರಬೇಕು. (ಈ) ನಿರ್ದಿಷ್ಟ ರೋಗನಿರ್ಣಯದ ಫಲಿತಾಂಶ ದೊರೆಯುವುದಕ್ಕೆ ಮುಂಚೆಯೇ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. (ಉ) ಸೋಂಕುರಹಿತ ಪ್ರದೇಶಗಳಲ್ಲಿ ದೊಡ್ಡರೋಗವು ಕಾಣಿಸಿಕೊಂಡಾಗ ಸೋಂಕು ಪ್ರಾಣಿಗಳೆಲ್ಲವನ್ನೂ ಸಾಯಿಸಬೇಕು. (ಊ) ಸೋಂಕು ಪ್ರದೇಶದಲ್ಲಿನ 6–8 ತಿಂಗಳ ವಯಸ್ಸಿನ ಮೇಲಿನ ಎಲ್ಲ ದನ, ಎಮ್ಮೆಗಳಿಗೂ ತಕ್ಷಣ ವ್ಯಾಕ್ಸಿನೇಷನ್ ಮಾಡಬೇಕು. ವ್ಯಾಕ್ಸಿನೇಷನ್ ಮಾಡಿದ ಪ್ರಾಣಿಗಳನ್ನು ಗುರುತುಹಚ್ಚಲು ಅವುಗಳಿಗೆ ಮುದ್ರೆಗಳನ್ನು ಹಾಕಬೇಕು. (ಋ) ಲಸಿಕೆ(ವ್ಯಾಕ್ಸಿನೇಷನ್)ಯನ್ನು ಶೇಖರಿಸಲು ಸರಿಯಾದ ಅನುಕೂಲಗಳಿರಬೇಕು ಮತ್ತು ರೋಗೋದ್ರೇಕ ಪ್ರದೇಶಗಳಿಗೆ ಅದು ತಕ್ಷಣ ದೊರೆಯುವಂತಿರಬೇಕು.

(6) **ರೋಗಪ್ರತಿರಕ್ಷೀಕರಣ (ವ್ಯಾಕ್ಸಿನೇಷನ್)** : ಸಾಮೂಹಿಕ ವ್ಯಾಕ್ಸಿನೇಷನ್ ಅಂದರೆ ಪ್ರಾಣಿಗಳಿಗೆ ಸಾಮೂಹಿಕವಾಗಿ ಲಸಿಕೆ ಹಾಕುವ ಕ್ರಮ ; ದೊಡ್ಡರೋಗ ನಿಯಂತ್ರಣದಲ್ಲಿ ತಿಳಿದಿರುವ ಒಂದು ಬಹು ಮುಖ್ಯ ಹಾಗೂ ಯಶಸ್ವಿಕ್ರಮ. ಪ್ರಪಂಚದ ಎಲ್ಲ ದೇಶಗಳೂ ವ್ಯಾಕ್ಸಿನೇಷನ್ ಕ್ರಮಗಳ ಪಾಲನೆಯಿಂದ ದೊಡ್ಡರೋಗವನ್ನು ಯಶಸ್ವಿಯಾಗಿ ತಡೆಗಟ್ಟಿವೆ. ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಪಶ್ಚಿಮ ಯೂರೋಪ್ ಇವೇ ಮುಂತಾದ ದೇಶಗಳು ಈಗಾಗಲೇ ಸಾಮೂಹಿಕ ವ್ಯಾಕ್ಸಿನೇಷನ್ ಮತ್ತು ಆಮದು ಮಾಡಿಕೊಂಡ ಪ್ರಾಣಿಗಳು ಉತ್ಪಾದಿಸುವ ಪದಾರ್ಥಗಳ ಪರೀಕ್ಷೆ ಮತ್ತು ಮುದ್ರೆಯೊತ್ತುವಿಕೆ, ರೋಗಗ್ರಸ್ತ ಪ್ರಾಣಿಗಳ

ಮತ್ತು ಅವುಗಳ ಸಂಪರ್ಕ ಪಡೆದಿರುವ ಪ್ರಾಣಿಗಳ ಸಾಮೂಹಿಕ ವಧೆ ಈ ಎಲ್ಲ ಕ್ರಮಗಳನ್ನು ಕೈಗೊಂಡಿವೆ.

ನಮ್ಮ ದೇಶದಲ್ಲಿ ಪ್ರಾಣಿಗಳಿಗೆ ಸಾಮೂಹಿಕವಾಗಿ ವ್ಯಾಕ್ಸಿನೇಷನ್ ಮಾಡುವುದು ಪಂಚವಾರ್ಷಿಕ ಯೋಜನೆಗಳ ಒಂದು ಅಂಗವಾಗಿದೆ. ಪೈಲಟ್ ಪ್ರಾಜೆಕ್ಟಾಗಿ ದನ, ಎಮ್ಮೆಗಳ ಸಾಮೂಹಿಕ ವ್ಯಾಕ್ಸಿನೇಷನ್ ಯೋಜನೆಯನ್ನು ಯಶಸ್ವಿಯಾಗಿ, ರಾಷ್ಟ್ರದಾದ್ಯಂತ ದೊಡ್ಡರೋಗ ನಿವಾರಣಾ ಯೋಜನೆಯಾಗಿ 1956ರಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಯಿತು. ಈ ಯೋಜನೆಯಿಂದಾಗಿ ರೋಗೋದ್ರೇಕಗಳ ಸಂಖ್ಯೆ ಇಳಿಮುಖವಾಯಿತು. ಪುನಃ ಪ್ರಾಣಿಗಳಲ್ಲಿ ವ್ಯಾಕ್ಸಿನೇಷನ್ ಮುಂದುವರಿಸುವಿಕೆ, ಸಾಮೂಹಿಕವಾಗಿ ಎಲ್ಲ ಪ್ರಾಣಿಗಳಿಗೂ ವ್ಯಾಕ್ಸಿನೇಷನ್ ಮಾಡುವಿಕೆ ಮತ್ತು ದೊಡ್ಡರೋಗವಿರುವ ಒಂದು ಪ್ರದೇಶದ ಸುತ್ತಲಿನ ಎಲ್ಲ ಪ್ರಾಣಿಗಳಿಗೂ ವ್ಯಾಕ್ಸಿನೇಷನ್‌ಮಾಡಿ ರೋಗವು ಆ ಪ್ರದೇಶದಿಂದ ಹೊರಗೆ ಹರಡದಂತೆ ತಡೆಗಟ್ಟುವಿಕೆ ಇವೇ ಮುಂತಾದುವು ಸಾಮೂಹಿಕ ವ್ಯಾಕ್ಸಿನೇಷನ್ ಯೋಜನೆಯಲ್ಲಿನ ವಿವಿಧ ಅಂಗಗಳು. ಕ್ರಿ.ಶ. 1956ರಲ್ಲಿ ಪ್ರಾರಂಭವಾದ ಸಾಮೂಹಿಕ ವ್ಯಾಕ್ಸಿನೇಷನ್ ಯೋಜನೆಯಲ್ಲಿ, 15 ವರ್ಷಗಳಲ್ಲಿ ಒಟ್ಟು 290 ದಶಲಕ್ಷ ವ್ಯಾಕ್ಸಿನೇಷನ್‌ಗಳನ್ನು ಕೈಗೊಳ್ಳಲಾಯಿತು.

ಕರ್ನಾಟಕ ರಾಜ್ಯದಲ್ಲೂ ಪ್ರಾಣಿಗಳ ದೊಡ್ಡರೋಗ ಒಂದು ಗಮನಾರ್ಹ ರೋಗವಾಗಿದೆ. ಇಲ್ಲಿ ದೊಡ್ಡರೋಗವು ಕ್ರಿ.ಶ. 1940ರ ಪೂರ್ವದಲ್ಲಿ ಹೆಚ್ಚು ಆತಂಕಕ್ಕೆಡೆಯುಂಟುಮಾಡಿತ್ತು. ಕ್ರಿ.ಶ. 1944-45ರ ಒಂದು ವರ್ಷದಲ್ಲಿಯೇ 71,000 ದನಗಳು ದೊಡ್ಡರೋಗಕ್ಕೆ ತುತ್ತಾದುವು. ಈ ಪರಿಸ್ಥಿತಿಯನ್ನು ಎದುರಿಸಲು ಕ್ರಿ.ಶ. 1955ರಲ್ಲಿ ಈ ರೋಗ ನಿವಾರಣೆಗಾಗಿ ಒಂದು ಪೈಲಟ್ ಪ್ರಾಜೆಕ್ಟ್ ಕಾರ್ಯೋನ್ಮುಖವಾಯಿತು. ರಾಜ್ಯದ ಎಲ್ಲೆಯ ಸುತ್ತಲೂ ರೋಗ ಪ್ರತಿರೋಧ ಸರಹದ್ದ(ಗಡಿ)ನ್ನು ಸ್ಥಾಪಿಸಲಾಯಿತು. ಈ ದೊಡ್ಡರೋಗ ನಿವಾರಣಾ ಪೈಲಟ್ ಪ್ರಾಜೆಕ್ಟ್ ಕ್ರಿ.ಶ.1957ಕ್ಕೆ ಅಂತ್ಯಗೊಂಡಿತ್ತು. ಪೈಲಟ್ ಪ್ರಾಜೆಕ್ಟ್ ಅಂತ್ಯಗೊಂಡ ಮಾತ್ರಕ್ಕೇ ರಾಜ್ಯದಲ್ಲಿ ದೊಡ್ಡರೋಗದ ನಿವಾರಣೆಯಾದ ಹಾಗಾಗಲಿಲ್ಲ. ದೊಡ್ಡ ರೋಗ ಪ್ರತಿರೋಧರಕ್ಷಿತ ಎಲ್ಲೆ (ಇಮ್ಯೂನ್ ಬ್ಯಾರಿಯರ್ಸ್ ಜೋನ್) ಬಿಗಿತ ಇಲ್ಲದಿದ್ದುದರಿಂದ ನೆರೆ ರಾಜ್ಯಗಳಿಂದ ಅಕ್ರಮವಾಗಿ ಬಂದ ದನಗಳಿಂದಲೂ ಹಾಗೂ ಇತರೆ ಕಾರಣಗಳಿಂದಾಗಿ ಕ್ರಿ.ಶ. 1963ರಲ್ಲಿ ಬೆಂಗಳೂರಿನಲ್ಲಿ ಪುನಃ ದೊಡ್ಡರೋಗವು ಉಗ್ರರೂಪದಲ್ಲಿ ಕಾಣಿಸಿಕೊಂಡು ಸುಮಾರು 5,000ದನಗಳು ಸತ್ತುವು.(15) ಅಲ್ಲದೆ, ಆಗಿಂದಾಗ್ಗೆ ರಾಜ್ಯದ ವಿವಿಧ ಎಡೆಗಳಲ್ಲಿ ದೊಡ್ಡರೋಗದ ಉದ್ರೇಕಗಳು ಕಾಣಿಸಿಕೊಳ್ಳುತ್ತಲೇ ಇದ್ದವು. ರಾಜ್ಯವನ್ನು ದೊಡ್ಡರೋಗದಿಂದ ವಿಮುಕ್ತಗೊಳಿಸಲು

ಹಾಗೂ ರಾಜ್ಯದೊಳಕ್ಕೆ ಆಗಿಂದಾಗ್ಗೆ ಬೇರೆಡೆಯಿಂದ ದೊಡ್ಡರೋಗ ಪ್ರವೇಶವಾಗುವುದನ್ನು ತಡೆಗಟ್ಟಲು, ದೊಡ್ಡರೋಗದ ವಿರುದ್ಧ ಸೂಕ್ತ ನಿವಾರಣಾಕ್ರಮಗಳನ್ನು ಕೈಗೊಳ್ಳಲೂ ಕ್ರಿ.ಶ. 1966ರಲ್ಲಿ ನಾಲ್ಕುಲಕ್ಷರೂಪಾಯಿಗಳ ವೆಚ್ಚದೊಂದಿಗೆ ಎರಡು ಹೊಸ ಯೋಜನೆಗಳು ನಮ್ಮ ರಾಜ್ಯದಲ್ಲಿ ಆರಂಭವಾದವು. ಈ ಯೋಜನೆಗಳು ಈಗಲೂ ಅಸ್ತಿತ್ವದಲ್ಲಿವೆ. ಎಲ್ಲ ದನಗಳಿಗೂ ದೊಡ್ಡರೋಗದ ವಿರುದ್ಧ ವ್ಯಾಕ್ಸಿನೇಷನ್ ಮಾಡುವುದು, ಬೇರೆಡೆಯಿಂದ ದೊಡ್ಡರೋಗದ ಪ್ರವೇಶವನ್ನು ತಡೆಗಟ್ಟುವುದು. ಈ ಯೋಜನೆಯ ಮುಖ್ಯ ಉದ್ದೇಶಗಳು. ಈ ಯೋಜನೆಯ ಮುಂದಿನ ಕಾರ್ಯಕ್ರಮಗಳು ಇಂತಿವೆ:

(1) **ಊತಕ ಸಂವರ್ಧ ದೊಡ್ಡರೋಗದ ವ್ಯಾಕ್ಸೀನು** (ಟಿಶ್ಯೂಕಲ್ಚರ್ ರಿಂಡರ್ ಪೆಸ್ಟ್ ವ್ಯಾಕ್ಸೀನು) ತಯಾರಿಸಲು ರಾಜ್ಯದಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸುವುದು.

(2) ಎಲ್ಲ ದನಗಳಿಗೆ ವ್ಯಾಕ್ಸಿನೇಷನ್ ಮಾಡುವುದರ ಜೊತೆಗೆ, ಅದನ್ನು ವರ್ಷ ವರ್ಷ ಮುಂದುವರೆಸುತ್ತಿರುವುದು. ಕರುಗಳಿಗೆಲ್ಲ ವ್ಯಾಕ್ಸಿನೇಷನ್ ಮಾಡುವುದು. ವ್ಯಾಕ್ಸಿನೇಷನ್ ಮಾಡದೆ ಉಳಿದುಕೊಂಡಿರುವ ಎಲ್ಲ ಪ್ರಾಣಿಗಳಿಗೂ ವ್ಯಾಕ್ಸಿನೇಷನ್ ಮಾಡುವುದು.

3) ರಾಜ್ಯದ ಗಡಿಗಳಲ್ಲಿ ಉಕ್ಕಡಗಳನ್ನು ಸ್ಥಾಪಿಸುವುದು. ಆ ಮೂಲಕ ನಮ್ಮ ಹಾಗೂ ನೆರೆ ರಾಜ್ಯಗಳ ನಡುವೆ ಬಲವಾದ ರೋಗ ಪ್ರತಿರೋಧ ಎಲ್ಲೆಯನ್ನು ಸ್ಥಾಪಿಸುವುದು. ಪ್ರಾಣಿಗಳ ಸಂಚಾರದ ಮೇಲೆ ನಿಯಂತ್ರಣೆ ವಿಧಿಸುವುದು.

4) ವ್ಯಾಕ್ಸಿನೇಷನ್ ಮಾಡುವುದರಿಂದ ಪ್ರಾಣಿಗಳಲ್ಲುಂಟಾಗುವ ರೋಗ ನಿರೋಧನಾ ಶಕ್ತಿಯ ಮಟ್ಟವನ್ನು ಅಳೆಯಲು ವಿವಿಧ ಬಗೆಯ ರಕ್ತಸಾರ ಪರೀಕ್ಷೆಗಳನ್ನು ರೂಪಿಸಿ ಆಚರಣೆಗೆ ತರುವುದು.

ದೊಡ್ಡರೋಗದ ವಿರುದ್ಧ ಕ್ರಿ.ಶ. 1947ರ ಮುಂಚೆ ದನಗಳಲ್ಲಿ ರೋಗ ಪ್ರತಿರೋಧನಾಶಕ್ತಿಯನ್ನುಂಟುಮಾಡಲು, ಅವುಗಳಿಗೆ ದೊಡ್ಡರೋಗದ ವಿಷಾಣುಗಳನ್ನು ಹೋರಿಗಳಿಗೆ ಅನುಗೊಳಿಸಿ (ಹೊಂದಿಸಿ) ತಯಾರಿಸಿದ ವ್ಯಾಕ್ಸೀನನ್ನು ಅತಿ ಪ್ರತಿರೋಧ ರಕ್ತಸಾರದೊಂದಿಗೆ ಕೊಡಲಾಗುತ್ತಿತ್ತು. ನಂತರ ನಾಟಿ ದನಗಳಲ್ಲಿ ದೊಡ್ಡರೋಗದ ವಿರುದ್ಧ ನಿರೋಧನಾಶಕ್ತಿಯನ್ನುಂಟುಮಾಡಲು ಮೇಕೆಗಳಿಗೆ ದೊಡ್ಡರೋಗ ವಿಷಾಣುಗಳನ್ನು ಕೊಟ್ಟು, ಅವುಗಳನ್ನು ಮೇಕೆಗಳ ಶರೀರಕ್ಕೆ ಅನುಗೊಳಿಸಿದ ವಿಷಾಣುಗಳಿಂದ ತಯಾರಿಸಿದ ವ್ಯಾಕ್ಸೀನನ್ನು (ಗೋಟ್ ಅಡಾಪ್ಟೆಡ್ ವೈರಸ್)

ಉಪಯೋಗಿಸಲಾಯಿತು. ಇದು ಹೆಚ್ಚು ಕ್ಷೇಮಕರವೂ, ಹೆಚ್ಚು ಶಕ್ತಿಯುತವೂ ಆದ ವ್ಯಾಕ್ಸೀನ್. ಆದರೆ ಇದು ವಿದೇಶೀ ಶುದ್ಧತಳಿಗಳಲ್ಲಿ ಹಾಗೂ ಮಿಶ್ರತಳಿಗಳಲ್ಲಿ ಹೆಚ್ಚು ಕೆಟ್ಟ ಪರಿಣಾಮವನ್ನುಂಟು ಮಾಡಿತು. ಆದ್ದರಿಂದ ಈ ವ್ಯಾಕ್ಸೀನನ್ನು ವಿದೇಶೀ ಶುದ್ಧತಳಿಗಳು ಹಾಗೂ ಮಿಶ್ರತಳಿ ದನಗಳಲ್ಲಿ ಬಳಸಲು ಸಾಧ್ಯವಾಗದೆ ಹೋಯಿತು. ವಿದೇಶೀ ತಳಿಗಳಲ್ಲೂ, ಮಿಶ್ರತಳಿಗಳಲ್ಲೂ ಹಾಗೂ ಈ ವ್ಯಾಕ್ಸೀನಿಗೆ ಕೆಟ್ಟ ಪ್ರತಿಕ್ರಿಯೆಯನ್ನು ತೋರಿಸುವ ಇತರ ಪ್ರಾಣಿಗಳಲ್ಲೂ ಉಪಯೋಗಿಸಲು ಕ್ಷೇಮಕರವಾದ **ಲೆಪಿನೈಸ್ಡ್ ವ್ಯಾಕ್ಸೀನ್** ಮತ್ತು **ಏವಿಯನೈಸ್ಡ್ ವ್ಯಾಕ್ಸೀನ್** ಗಳನ್ನು ಬಳಕೆಗೆ ತರಲಾಯಿತು. ಆದರೆ ಇದರಲ್ಲೂ ಅನಾನುಕೂಲತೆಗಳು ಕಂಡು ಬಂದವು. ಇವುಗಳನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಇವು ಸುಲಭವಾಗಿ ಕೆಡುತ್ತವೆ (ನಾಶಹೊಂದುತ್ತವೆ). ಇದರಿಂದಾಗಿ ಇವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ತಯಾರಿಸಿ, ಎಲ್ಲ ಕ್ಷೇತ್ರಗಳಿಗೆ ಕಳುಹಿಸಿ ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿಲ್ಲದ್ದಕ್ಕೆ ಇವುಗಳ ಬಳಕೆಯನ್ನು ಕೈಬಿಡಲಾಯಿತು. ನಂತರ ದೊಡ್ಡರೋಗದ ವಿಷಾಣುಗಳನ್ನು ಊತಕಸಂವರ್ಧಕ್ಕೆ (ಟಿಶ್ಯೂಕಲ್‌ಚರ್) ಒಗ್ಗಿಸಿ ಊತಕಸಂವರ್ಧನ ದೊಡ್ಡರೋಗ ವ್ಯಾಕ್ಸೀನನ್ನು ತಯಾರಿಸಲಾಯಿತು. ಇದು ಕ್ಷೇಮಕರ ಹಾಗೂ ಹೆಚ್ಚು ಪ್ರಭಾವಶಾಲಿಯಾದುದು. ಅಲ್ಲದೆ, ಇದನ್ನು ಅಧಿಕ ಪ್ರಮಾಣದಲ್ಲಿ ಕಳುಹಿಸಿಕೊಡಲು ಸಾಧ್ಯವಿದೆ. ಸಾಮೂಹಿಕವಾಗಿ ಪ್ರಾಣಿಗಳಿಗೆ ವ್ಯಾಕ್ಸಿನೇಷನ್ ಮಾಡಲು ಇದು ಉಪಯುಕ್ತವಾಗಿ ಕಂಡುಬಂದು ಎಲ್ಲಕಡೆಗೂ ಇದರ ಬಳಕೆ ಆರಂಭವಾಯಿತು. ದೊಡ್ಡರೋಗ ನಿವಾರಣೆಯಲ್ಲಿ ಇಂದು ಇದನ್ನು ಬಳಸದೆ ಗತ್ಯಂತರವೇ ಇಲ್ಲದಾಗಿದೆ.

ದನ ಮತ್ತು ಎಮ್ಮೆಗಳಿಗೆ ರೋಗ ಪ್ರತಿರೋಧೀಕರಣ (ಇಮ್ಯುನೈಜೇಷನ್) ವನ್ನು ಮಾಡಲು ವಿವಿಧ ವ್ಯಾಕ್ಸೀನ್‌ಗಳುಂಟು. ಆದರೆ ಪರಿಸ್ಥಿತಿಗೆ ತಕ್ಕಂತೆ ಸೂಕ್ತ ವ್ಯಾಕ್ಸೀನಿನ ಆಯ್ಕೆ ಆವಶ್ಯಕ.

ದೊಡ್ಡರೋಗದ ವಿರುದ್ಧ ಹಾಕುವ ವ್ಯಾಕ್ಸೀನುಗಳು ಈ ಕೆಳಗಿನಂತಿವೆ:

(1) ಲೆಪಿನೈಸ್ಡ್ ವೈರಸ್ ವ್ಯಾಕ್ಸೀನ್

(2) ಏವಿಯನೈಸ್ಡ್ ವೈರಸ್ ವ್ಯಾಕ್ಸಿನ್ (ಕೋಳಿಗಳಿಗೆ)

ಅಥವಾ

ಚಿಕನ್ ಎಂಬ್ರಿಯೋ ಅಡಾಪ್ಟೆಡ್ ವೈರಸ್ ವ್ಯಾಕ್ಸೀನ್ (ಕೋಳಿಯ ಭ್ರೂಣಕ್ಕೆ ಹೊಂದಿಸಿದ ವಿಷಾಣುಗಳಿಂದ ತಯಾರಿಸಿದ ವ್ಯಾಕ್ಸೀನ್)

(3) ಕ್ಯಾಪ್ರಿನೈಸ್ಡ್ ವೈರಸ್ ವ್ಯಾಕ್ಸೀನ್ (ಗೋಟ್ ಅಡಾಪ್ಟೆಡ್ ವೈರಸ್ ವ್ಯಾಕ್ಸೀನ್, ಜಿ.ಟಿ.ವಿ)

(4) ಸೆಲ್ ಟಿಶ್ಯೂಕಲ್ಚರ್ ವ್ಯಾಕ್ಸೀನ್ (ಊತಕಸಂವರ್ಧನ ವ್ಯಾಕ್ಸೀನ್)

ಲೆಪಿನೈಸ್ಡ್ ವೈರಸ್ ವ್ಯಾಕ್ಸೀನ್

ಇದು ಮೊಲಗಳ ಶರೀರಕ್ಕೆ ವಿಷಾಣುಗಳನ್ನು ಕೊಟ್ಟು ಅನುಗೊಳಿಸಿ ತಯಾರಿಸಿದ ವ್ಯಾಕ್ಸೀನ್. ಇದನ್ನು ತಯಾರಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮೊಲಗಳು ಬೇಕು. ಆದ್ದರಿಂದ ಇದನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲು ಸಾಧ್ಯವಿಲ್ಲ. ಇದು ಕೆಲವು ವಿಷಯಗಳಲ್ಲಿ ಜಿ.ಟಿ.ವಿ. ವ್ಯಾಕ್ಸೀನಿಗಿಂತಲೂ ಉತ್ತಮ. ಇದನ್ನು ಮಿಶ್ರತಳಿ ಮತ್ತು ಎತ್ತರದ ಪ್ರದೇಶಗಳಲ್ಲಿರುವ ಪ್ರಾಣಿಗಳು ಹಾಗೂ ಜಿ.ಟಿ.ವಿ. ವ್ಯಾಕ್ಸೀನಿಗೆ ಕೆಟ್ಟ ಪ್ರತಿಕ್ರಿಯೆ ತೋರಿಸುವ ಪ್ರಾಣಿಗಳಲ್ಲೂ ರೋಗ ಪ್ರತಿರೋಧನಾ ಶಕ್ತಿಯನ್ನುಂಟು ಮಾಡಲು ಅಲ್ಪ ಪ್ರಮಾಣದಲ್ಲಿ ತಯಾರಿಸಲಾಗುತ್ತದೆ.

ಗೋಟ್ ಅಡಾಪ್ಟೆಡ್ ವೈರಸ್ ವ್ಯಾಕ್ಸೀನ್ (ಜಿ.ಟಿ.ವಿ.) : ದೊಡ್ಡರೋಗ ವಿಷಾಣುಗಳನ್ನು ಮೇಕೆಗಳಿಗೆ ಕೊಟ್ಟು, ಆ ವಿಷಾಣುಗಳು ಮೇಕೆಗಳ ಶರೀರಕ್ಕೆ ಹೊಂದಿಕೊಳ್ಳುವಂತೆ ಮಾಡಿ ಆ ಮೂಲಕ ವಿಷಾಣುಗಳ ರೋಗೋತ್ಪಾದನಾಶಕ್ತಿಯನ್ನು ಕುಗ್ಗಿಸಿ, ತಯಾರಿಸಿದ ವ್ಯಾಕ್ಸೀನ್ ಇದು. ಸ್ಥಳೀಯ ನಾಟಿ ದನ ಮತ್ತು ಎಮ್ಮೆಗಳಲ್ಲಿ ಇದು ಜೀವನಪರ್ಯಂತ ರೋಗ ಪ್ರತಿರೋಧನಾ ಶಕ್ತಿಯನ್ನು ನೀಡುತ್ತದೆ. ಸ್ವಲ್ಪಮಟ್ಟಿಗೆ ಇದು ರೋಗಗ್ರಾಹಕ ಪ್ರಾಣಿಗಳಲ್ಲಿ ಅದರಲ್ಲೂ ವಿಶೇಷವಾಗಿ ವಿದೇಶೀ ದನ ಮತ್ತು ಎಮ್ಮೆ ತಳಿಗಳಲ್ಲಿ ಹಾಗೂ ಕರುಗಳಲ್ಲಿ ಜ್ವರ, ಬೇಧಿ ಇವೇ ಮುಂತಾದ ದುಷ್ಪರಿಣಾಮಗಳನ್ನುಂಟುಮಾಡುತ್ತದೆ. ಹಾಲು ಕೊಡುತ್ತಿರುವ ಪ್ರಾಣಿಗಳಲ್ಲಿ ಹಾಲಿನ ಉತ್ಪತ್ತಿ ಇಳಿಮುಖವಾಗುತ್ತದೆ.[14] ಗರ್ಭಧರಿಸುವ ಪ್ರಾಣಿಗಳಲ್ಲಿ ಗರ್ಭಪಾತ ಸಂಭವಿಸಬಹುದು.

ಊತಕ ಸಂವರ್ಧನ ವ್ಯಾಕ್ಸೀನ್(ಟಿಶ್ಯೂಕಲ್ಚರ್ ವ್ಯಾಕ್ಸೀನ್,ಟಿ.ಸಿ.ವಿ) : ಇದು ದೊಡ್ಡರೋಗ ವಿಷಾಣುಗಳನ್ನು ಊತಕ ಮಾಧ್ಯಮದಲ್ಲಿ ಬೆಳೆಸಿ ಅವುಗಳನ್ನು ಊತಕ ಕೋಶಿಕೆಗಳಿಗೆ ಹೊಂದಿಸಿ ತಯಾರಿಸಿದ ವ್ಯಾಕ್ಸೀನ್. ಇಂದು ಇದನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಈ ವ್ಯಾಕ್ಸೀನ್ ಕೆಳಗಿನ ಕೆಲವು ವಿಶೇಷ ಗುಣಗಳನ್ನು ಪಡೆದಿದೆ :

(1) ಇದು ಸೌಮ್ಯ ಮತ್ತು ನಿರಪಾಯಕಾರಿ ಪ್ರಾಣಿಗಳಲ್ಲಿ ಯಾವ ರೀತಿಯ ದುಷ್ಪರಿಣಾಮಗಳನ್ನೂ ಉಂಟುಮಾಡುವುದಿಲ್ಲ.

(2) ಸಾಕಷ್ಟು ಅವಧಿಯವರೆಗೆ ಪ್ರಾಣಿಗಳಿಗೆ ದೊಡ್ಡರೋಗದ ಪ್ರತಿರೋಧನಾ ಶಕ್ತಿಯನ್ನು ನೀಡುತ್ತದೆ.

(3) ರೋಗಗ್ರಾಹಕ ಪ್ರಾಣಿಗಳಲ್ಲಿ ಸುಪ್ತವಾಗಿರುವ ರೋಗವನ್ನು ಪುನಃ ಹೊರಹೊಮ್ಮಲು ಬಿಡುವುದಿಲ್ಲ.

(4) ಇದನ್ನು ಅಧಿಕ ಪ್ರಮಾಣದಲ್ಲಿ ಸುಲಭ ಹಾಗೂ ಅಗ್ಗವಾಗಿ ತಯಾರಿಸಬಹುದು. ಇದನ್ನು ತಯಾರಿಸಲು ಪ್ರಾಣಿಗಳ ಅವಶ್ಯಕತೆಯಿಲ್ಲ.

(5) ತನೂಕರಿತ (ಅಟೆನ್ಯುಯೇಟೆಡ್) ಅಂದರೆ, ರೋಗೋತ್ಪಾದನಾ ಶಕ್ತಿಯನ್ನು ಕುಗ್ಗಿಸಿದ ದೊಡ್ಡರೋಗ ವಿಷಾಣುಗಳು ವ್ಯಾಕ್ಸಿನೇಷನ್ ಮಾಡಿದ ಪ್ರಾಣಿಗಳಿಂದ ಜೊತೆಯಲ್ಲಿರುವ ಆರೋಗ್ಯಕರ ಇತರ ರೋಗಗ್ರಾಹಕ ಪ್ರಾಣಿಗಳಿಗೆ ಹರಡುವ ಭಯವಿಲ್ಲ.

ದೊಡ್ಡರೋಗ ನಿಯಂತ್ರಣಾಕಾರ್ಯವು ಯಶಸ್ವಿಯಾಗಲು ಶ್ರೇಷ್ಠಮಟ್ಟದ ಗುಣಗಳುಳ್ಳ ಹೆಚ್ಚು ಶಕ್ತಿಯುತವಾದ ವ್ಯಾಕ್ಸೀನನ್ನು ತಯಾರಿಸುವುದು ಅವಶ್ಯಕ. ತಯಾರಿಸಿದ ವ್ಯಾಕ್ಸೀನನ್ನು ಅದೇ ಅವಸ್ಥೆಯಲ್ಲಿ ಶೇಖರಿಸಬೇಕಾದುದು ಮತ್ತೊಂದು ಮುಖ್ಯ ಅಂಶ. ಹಿಮಶುದ್ಧೀಕರಣ ವಿಧಾನವು ವ್ಯಾಕ್ಸೀನನ್ನು ಉತ್ಕೃಷ್ಟ ಮಟ್ಟದಲ್ಲಿರಿಸುವ ಒಂದು ಯಶಸ್ವೀ ಸಾಧನವಾಗಿದೆ. ಹಿಮಶುಷ್ಕೀಕರಿತ ವ್ಯಾಕ್ಸೀನ್, ಅದನ್ನು ತಯಾರಿಸಿದಂದಿನಿಂದ ಉಪಯೋಗಿಸುವ ಕೊನೆಯ ಗಳಿಗೆಯವರೆಗೂ ಅದು ಶಕ್ತಿಯುತವಾಗಿಯೇ ಇರುತ್ತದೆ. ಅದರ ಆಕಾರ, ರೂಪ ಮತ್ತು ಪ್ರಮಾಣ ಚಿಕ್ಕದಾಗಿರುವುದರಿಂದ ಅದನ್ನು ಸಾಗಿಸಲೂ ಸಮಸ್ಯೆಯಾಗುವುದಿಲ್ಲ. ವ್ಯಾಕ್ಸೀನನ್ನು ತಯಾರಿಸಿ ಉತ್ಪಾದನಾ ಕೇಂದ್ರಗಳಲ್ಲಿಯೇ ಶೇಖರಿಸಿ ಬೇಕಾದಾಗ ಹೊರಗಿನ ಸ್ಥಳಗಳಿಗೆ ಒದಗಿಸಬಹುದು.

ಭಾರತದಲ್ಲಿ ಇಂತಹ ಕೇಂದ್ರಗಳು ಐ.ವಿ.ಆರ್.ಐ. ಸೇರಿದಂತೆ ಒಟ್ಟು ಏಳು ಇವೆ.

11. ಕರ್ನಾಟಕ ರಾಜ್ಯದಲ್ಲಿ ದೊಡ್ಡರೋಗ ನಿವಾರಣಾ ಯೋಜನೆ

ಕರ್ನಾಟಕದಲ್ಲಿ ದನಗಳ ದೊಡ್ಡರೋಗವನ್ನು ತಡೆಗಟ್ಟಲು, ದೊಡ್ಡರೋಗದ ವಿರುದ್ಧ ದನಗಳಿಗೆಲ್ಲ ಸಾಮೂಹಿಕವಾಗಿ ವ್ಯಾಕ್ಸಿನೇಷನ್ ಮಾಡುವ ಬೃಹತ್ ಕಾರ್ಯಕ್ರಮವೊಂದು ಪ್ರಪ್ರಥಮವಾಗಿ 1955ರಲ್ಲಿ ಆರಂಭವಾಯಿತು. ಅದೊಂದು ಪೈಲಟ್ ಯೋಜನೆಯಾಗಿತ್ತು. ಅದಾದ ಮೇಲೆ ದೊಡ್ಡರೋಗ ನಿವಾರಣಾ ಯೋಜನೆಯೊಂದು 1967ರಲ್ಲಿ ಕಾರ್ಯರೂಪಕ್ಕೆ ಬಂದಿತು. ಇದಕ್ಕೆ ಕೇಂದ್ರ ಸರ್ಕಾರದ ನೆರವೂ ಇತ್ತು. ಆದರೆ ಕೇಂದ್ರ ಸರ್ಕಾರದ ನೆರವು ಬಹಳಕಾಲ ಮುಂದುವರೆಯಲಿಲ್ಲ. ಐದು ವರ್ಷಗಳ ನಂತರ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ದೊರೆಯುತ್ತಿದ್ದ ನೆರವು ನಿಂತಿತು. ಕೇಂದ್ರ ಸರ್ಕಾರದ ನೆರವು ನಿಂತ ಮೇಲೆ ಈ ಯೋಜನೆಯನ್ನು ರಾಜ್ಯ ಸರ್ಕಾರವೇ ಮುಂದುವರೆಸಿತು. ಮೊದಲ ಯೋಜನೆಯಲ್ಲಿಯೇ ಕೆಲವೊಂದು ಬದಲಾವಣೆಗಳನ್ನು ಮಾಡಿ 15-11-1972ರಲ್ಲಿ ಪುನರ್ರಚಿಸಲಾಯಿತು. ಈ ಯೋಜನೆಯನ್ನು ರಾಜ್ಯ ಪಶುಸಂಗೋಪನಾ ಇಲಾಖೆಯ ಒಂದು ಮುಖ್ಯ ಕ್ರಿಯಾತ್ಮಕ ಅಂಗವಾಗಿ ಸೇರಿಸಿಕೊಳ್ಳಲಾಯಿತು. ಇದು ಇಲಾಖೆಯಲ್ಲಿ ಹೆಚ್ಚು ಚಟುವಟಿಕೆಯಿಂದ ಕೆಲಸಮಾಡುವ ವಿಭಾಗವಾಯಿತು ಇಲಾಖೆಯಲ್ಲಿ ಸೇರಿಕೊಂಡಾದ ಮೇಲೆ ಅಲ್ಲಿ ಲಭ್ಯವಾಗುವ ಎಲ್ಲ ಅನುಕೂಲಗಳನ್ನೂ ಇದಕ್ಕೆ ನೀಡಲಾಯಿತು; ತಾಂತ್ರಿಕ ಸೌಲಭ್ಯಗಳನ್ನೂ, ತಾಂತ್ರಿಕ ತಜ್ಞರನ್ನೂ ಇದಕ್ಕೆ ವಿಶೇಷವಾಗಿ ವರ್ಗಾಯಿಸಲಾಯಿತು. ರಾಜ್ಯದಲ್ಲಿ ದೊಡ್ಡರೋಗದ ಹತೋಟಿ ಮತ್ತು ನಿರ್ಮೂಲನೆ ಇದರ ಮುಖ್ಯಗುರಿ. ಮಿಶ್ರತಳಿ ಹಸುಗಳನ್ನು ಹೆಚ್ಚಾಗಿ ಸಾಕಿರುವ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ದೊಡ್ಡರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು ಈ ಯೋಜನೆಯ ಮೂಲಕ ವಿಶೇಷ ಗಮನ ನೀಡಲಾಯಿತು. ಈ ಯೋಜನೆಯು ವರ್ಷ ವರ್ಷ ಮುಂದುವರೆಯುತ್ತ ಬಂದಿದೆ.

ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ, ಮೂರು ಜಾಗೃತ ಕೇಂದ್ರಗಳೂ (ವಿಜಿಲೆನ್ಸ್‌ಯೂನಿಟ್) ಹಾಗೂ ನಾಲ್ಕು ದೊಡ್ಡರೋಗ ಪ್ರತಿಬಂಧಕ ಕೇಂದ್ರಗಳೂ (ಚೆಕ್‌ಪೋಸ್ಟ್) ರಾಜ್ಯದಲ್ಲಿ ಕಾರ್ಯಾರಂಭವಾದುವು. ರಾಜ್ಯದಲ್ಲಿ ದೊಡ್ಡರೋಗವು ತಲೆಯೆತ್ತದಂತೆ ನೋಡಿಕೊಳ್ಳುವುದು, ಎಲ್ಲ ಕಡೆ ಗಮನವಿರಿಸಿದ್ದು ಎಲ್ಲಿಯೇ ಆದರೂ ದೊಡ್ಡರೋಗದ ಸೂಚನೆ ಕಂಡುಬಂದ ಕೂಡಲೇ ಅಲ್ಲಿಗೆ ಧಾವಿಸಿ ತಕ್ಕ ಮುಂಜಾ

ಕ್ರಿಯಾ ಕ್ರಮಗಳನ್ನು ಕೈಗೊಳ್ಳುವುದು, ಅಷ್ಟೇ ಅಲ್ಲದೆ ನಿರಂತರ ತಡೆಯಿಲ್ಲದ ಜಾನುವಾರು ಸಾಗಾಟ ಸಂಚಾರಗಳಿಂದ ನಮ್ಮ ರಾಜ್ಯದಿಂದ ನೆರೆಯ ರಾಜ್ಯಗಳಿಗೆ ಹರಡುವ ಇಲ್ಲವೇ ನೆರೆಯ ರಾಜ್ಯಗಳಿಂದ ನಮ್ಮ ರಾಜ್ಯದೊಳಕ್ಕೆ ರೋಗ ಪ್ರವೇಶಿಸುವ ಸಂಭವನಗಳನ್ನು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳುವುದು ಈ ಜಾಗ್ರತ ಕೇಂದ್ರಗಳ ಹಾಗೂ ಪ್ರತಿಬಂಧಕ ಕೇಂದ್ರಗಳ ಮುಖ್ಯ ಉದ್ದೇಶ. ಅಂತಹ ಜಾಗ್ರತ ಕೇಂದ್ರಗಳು ಮೈಸೂರು, ಕೋಲಾರ ಮತ್ತು ಬೆಳಗಾವಿ ಜಿಲ್ಲೆಗಳಲ್ಲೂ, ಪ್ರತಿಬಂಧಕ ಕೇಂದ್ರಗಳು ದಕ್ಷಿಣ ಕನ್ನಡ, ತುಮಕೂರು, ಬಿಜಾಪುರ, ಬಳ್ಳಾರಿ ಜಿಲ್ಲೆಗಳಲ್ಲೂ ಇವೆ.

ಪ್ರತಿಯೊಂದು ಜಾಗ್ರತ ಕೇಂದ್ರದಲ್ಲಿ ಒಬ್ಬೊಬ್ಬ ವೆಟರ್ನರಿ ಅಸಿಸ್ಟೆಂಟ್ ಸರ್ಜನ್ನರ ನೇತೃತ್ವದಲ್ಲಿ ಹತ್ತು ಮಂದಿ ವೆಟರ್ನರಿ ಲೈವ್‌ಸ್ಟಾಕ್ ಇನ್‌ಸ್ಪೆಕ್ಟರುಗಳ ತಂಡವಿರುತ್ತದೆ. ಇಂತಹ ಪ್ರತಿಯೊಂದು ತಂಡಕ್ಕೂ ಒಂದೊಂದು ವಾಹನವನ್ನು ಒದಗಿಸಲಾಗಿರುತ್ತದೆ. ದೊಡ್ಡರೋಗೋದ್ರೇಕದ ಬಗ್ಗೆ ಜಾಗರೂಕತೆ ವಹಿಸುವುದೇ ಅಲ್ಲದೆ ರಾಜ್ಯಗಡಿ ಪ್ರದೇಶಗಳಿಗೆ ಧಾವಿಸಿ ಎಲ್ಲೆಯಲ್ಲಿರುವ ಎಲ್ಲ ದನಗಳಿಗೂ ದೊಡ್ಡ ರೋಗದ ವಿರುದ್ಧ ವ್ಯಾಕ್ಸಿನೇಷನ್ ಮಾಡಿ ಅಲ್ಲಿ ದೊಡ್ಡರೋಗ ಪ್ರತಿಬಂಧಕ ಎಲ್ಲೆಯನ್ನು ನಿರ್ಮಿಸುವುದು ಈ ತಂಡದ ಕೆಲಸ. ಪ್ರತಿಬಂಧಕ ಕೇಂದ್ರಗಳನ್ನು ರಾಜ್ಯಗಳೆರಡರ ನಡುವಿರುವ ಹೆದ್ದಾರಿಯಲ್ಲಿ ನಿರ್ಮಿಸಲಾಗಿರುತ್ತದೆ. ಇಲ್ಲಿ ರಾಜ್ಯ ಗಡಿಯಿಂದ ಆಚೆ ಹೋಗುವ ಹಾಗೂ ನೆರೆರಾಜ್ಯಗಳಿಂದ ನಮ್ಮ ರಾಜ್ಯದೊಳಕ್ಕೆ ಪ್ರವೇಶಿಸುವ ಎಲ್ಲ ಜಾನುವಾರುಗಳಿಗೂ ದೊಡ್ಡರೋಗದ ವಿರುದ್ಧ ವ್ಯಾಕ್ಸಿನೇಷನ್ ಮಾಡಲಾಗುತ್ತದೆ.

ಮೇಲಿನ ಯೋಜನೆಯ ಜೊತೆಗೆ ರಾಜ್ಯದಲ್ಲಿ ಕೇಂದ್ರಸರ್ಕಾರದ ಮತ್ತೊಂದು ದೊಡ್ಡರೋಗ ನಿವಾರಣಾ ಯೋಜನೆಯು 1975ರಿಂದ ಕಾರ್ಯನಿರತವಾಗಿದೆ. ಈ ಯೋಜನೆಯಲ್ಲಿ ಆರು ಜಾಗ್ರತ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಈ ಜಾಗ್ರತ ಕೇಂದ್ರಗಳು ಬೀದರ್, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ, ಬೆಂಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿವೆ. ಇದಲ್ಲದೆ, ಬೆಳಗಾವಿ ಜಿಲ್ಲೆಯ ಕಾಗವಾಡದಲ್ಲಿ ಒಂದು ಪ್ರತಿಬಂಧಕ ಕೇಂದ್ರವನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ಜಾಗ್ರತ ಕೇಂದ್ರದಲ್ಲೂ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರರ ನಾಯಕತ್ವದಲ್ಲಿ ಹತ್ತು ಮಂದಿ ವೆಟರ್ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರುಗಳಿರುವ ಒಂದೊಂದು ತಂಡ ಕೆಲಸ ಮಾಡು ತ್ತಿರುತ್ತದೆ. ಪ್ರತಿಯೊಂದು ತಂಡಕ್ಕೂ ಒಂದೊಂದು ವಾಹನವನ್ನು ಒದಗಿಸಲಾಗಿದೆ. ಪ್ರತಿಬಂಧಕ ಕೇಂದ್ರದಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಹಾಗೂ ಮೂರು ಮಂದಿ ವೆಟರ್ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರುಗಳೂ ಇರುತ್ತಾರೆ.

ಜಾಗೃತ ಕೇಂದ್ರಗಳವರು ಆಯಾ ಜಿಲ್ಲೆಗಳಲ್ಲಿ ರೋಗೋದ್ರೇಕಗಳಾದ ಸ್ಥಳಗಳಲ್ಲಿ ಎಲ್ಲ ದನಗಳಿಗೂ ವ್ಯಾಕ್ಸಿನೇಷನ್ ಮಾಡುವುದರ ಜೊತೆಗೆ ರೋಗೋದ್ರೇಕಗಳಿಲ್ಲದ ಸಮಯಗಳಲ್ಲಿ ಸುಲಭವಾಗಿ ರೋಗೋದ್ರೇಕಗಳಿಗೆ ಈಡಾಗುವ ಪ್ರದೇಶಗಳಲ್ಲಿ ಎಲ್ಲ ಪ್ರಾಣಿಗಳಿಗೂ ದೊಡ್ಡರೋಗದ ವಿರುದ್ಧ ಮತ್ತೊಮ್ಮೆ ವ್ಯಾಕ್ಸಿನೇಷನ್ ಕ್ರಮ ಕೈಗೊಳ್ಳುತ್ತಾರೆ. ಎರಡು ರಾಜ್ಯಗಳ ನಡುವೆ ಹೆದ್ದಾರಿ ಗಡಿಯಲ್ಲಿ ಸ್ಥಾಪಿಸಲಾಗಿರುವ ಪ್ರತಿಬಂಧಕ ಕೇಂದ್ರದ ತಂಡದವರು ನೆರೆರಾಜ್ಯದಿಂದ ರಾಜ್ಯದೊಳಕ್ಕೆ ಬರುವ ಹಾಗೂ ರಾಜ್ಯದ ಗಡಿಯಿಂದ ಹೊರಕ್ಕೆ ಹೋಗುವ ಎಲ್ಲ ಪ್ರಾಣಿಗಳನ್ನು ಅವುಗಳಿಗೆ ದೊಡ್ಡರೋಗದ ವಿರುದ್ಧ ವ್ಯಾಕ್ಸಿನೇಷನ್ ಮಾಡಿದೆಯೇ ಇಲ್ಲವೇ ಎಂದು ಪರೀಕ್ಷಿಸುವ ಹಾಗೂ ಅವುಗಳಿಗೂ ಕಡ್ಡಾಯವಾಗಿ ವ್ಯಾಕ್ಸಿನೇಷನ್ ಮಾಡುವ ತಮ್ಮ ಮಾಮೂಲು ಕಾರ್ಯದ ಜೊತೆಗೆ ನೆರೆರಾಜ್ಯದ ಗಡಿ ಪ್ರದೇಶದ ಸುಮಾರು 15 ಕಿಮೀ ವಿಸ್ತೀರ್ಣದೊಳಗಿನ ಎಲ್ಲ ಪ್ರಾಣಿಗಳಿಗೂ ವ್ಯಾಕ್ಸಿನೇಷನ್ ಮಾಡಿ ದೊಡ್ಡರೋಗ ಪ್ರತಿಬಂಧಕ ಎಲ್ಲೆಯನ್ನು ನಿರ್ಮಿಸುತ್ತಾರೆ.

ದೊಡ್ಡರೋಗ ನಿವಾರಣಾ ಕೇಂದ್ರದ ಮುಖ್ಯ ಕಾರ್ಯಸ್ಥಳ(ಹೆಡ್‌ಕ್ವಾರ್ಟರ್) ಬೆಂಗಳೂರು. ನಗರದ ಹೆಬ್ಬಾಳದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ಬೈಯಾಲೋಜಿಕಲ್ಸ್ ಇವರ ಕಾರ್ಯಕಲಾಪಗಳ ಕೇಂದ್ರಾಲಯ. ಇದಕ್ಕಾಗಿಯೇ ಪ್ರತ್ಯೇಕವಾದ ಡೆಪ್ಯುಟಿ ಡೈರೆಕ್ಟರ್ ಇದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ (17 ಜಿಲ್ಲೆಗಳಲ್ಲಿ) ಇದರ ವಿಭಾಗಗಳಿದ್ದು ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರರಂತೆ ಒಟ್ಟು 17 ಮಂದಿ ಅಸಿಸ್ಟೆಂಟ್ ಡೈರೆಕ್ಟರ್‌ಗಳಿದ್ದಾರೆ. ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಾತ್ರ ಕ್ರಮವಾಗಿ ನಾಲ್ಕು, ಎರಡು ವಿಶೇಷ ದೊಡ್ಡರೋಗ ನಿವಾರಣಾ ತಂಡಗಳಿವೆ. ಈ ಎರಡು ಕೇಂದ್ರಗಳೂ ಒಬ್ಬೊಬ್ಬ ಸಹಾಯಕ ದೊಡ್ಡರೋಗ ನಿವಾರಣಾಧಿಕಾರಿಗಳ ನಾಯಕತ್ವದಲ್ಲಿ ಕೆಲಸಮಾಡುತ್ತಿವೆ.

ಈ ಯೋಜನೆಗಾಗಿ ಪ್ರತಿವರ್ಷ ಹದಿನೇಳು ಲಕ್ಷರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಪ್ರತಿವರ್ಷ ಸುಮಾರು ಎರಡೂವರೆ ಲಕ್ಷ ಬೆಲೆಯ ವ್ಯಾಕ್ಸೀನನ್ನು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಕೇಂದ್ರ (ಐ.ವಿ.ಆರ್.ಐ. ಮುಕ್ತೇಶ್ವರ, ಉತ್ತರ ಪ್ರದೇಶ) ದಿಂದಲೂ, ಭಾರತೀಯ ಪಶುವೈದ್ಯಕೀಯ ರೋಗನಿಯಂತ್ರಣ ಔಷಧ ತಯಾರಿಕಾ ಕೇಂದ್ರ(ಐ.ಸಿ.ಪಿ.ಎಸ್., ರಾಣಿಪೇಟ್, ತಮಿಳುನಾಡು) ದಿಂದಲೂ ಕೊಂಡುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಕೆಲಸಮಾಡುತ್ತಿರುವ ದೊಡ್ಡರೋಗ ನಿವಾರಣೆಯ ವಿವಿಧ ಯೋಜನೆಗಳು ಹಾಗೂ ಅದಕ್ಕೆ ಸಂಬಂಧಿಸಿದ ತಾಂತ್ರಿಕ ಅಧಿಕಾರಿ ವರ್ಗದ ವಿವರಗಳು ಮುಂದಿನ ಪುಟದಲ್ಲಿನಂತಿರುತ್ತವೆ:

ದೊಡ್ಡರೋಗ ನಿವಾರಣಾ ಯೋಜನೆ

1 ರಾಜ್ಯ ಸರ್ಕಾರದ ಯೋಜನೆ

ದೊಡ್ಡರೋಗ ನಿವಾರಣಾ ಯೋಜನೆ ಕೇಂದ್ರಾಲಯ
ಬೆಂಗಳೂರು

1. ಡೆಪ್ಯುಟಿ ಡೈರೆಕ್ಟರ್	1
2. ವೆಟರ್ನರಿ ಅಸಿಸ್ಟೆಂಟ್ ಸರ್ಜನ್	2

ಸಹಾಯಕ ದೊಡ್ಡರೋಗ ನಿವಾರಣಾಧಿಕಾರಿಗಳ ಕಛೇರಿ
ಬೆಂಗಳೂರು

1. ಸಹಾಯಕ ದೊಡ್ಡರೋಗ ನಿವಾರಣಾಧಿಕಾರಿ	1
2. ವೆಟರ್ನರಿ ಅಸಿಸ್ಟೆಂಟ್ ಸರ್ಜನ್	4
3. ವೆಟರ್ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್	12

ಸಹಾಯಕ ದೊಡ್ಡರೋಗ ನಿವಾರಣಾಧಿಕಾರಿಗಳ ಕಛೇರಿ
ಮೈಸೂರು

1. ಸಹಾಯಕ ದೊಡ್ಡರೋಗ ನಿವಾರಣಾಧಿಕಾರಿ	1
2. ವೆಟರ್ನರಿ ಅಸಿಸ್ಟೆಂಟ್ ಸರ್ಜನ್	2
3. ವೆಟರ್ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್	6

ದೊಡ್ಡರೋಗ ನಿವಾರಣಾ ಯೋಜನೆ
ಜಿಲ್ಲಾವಾರು ಕಾರ್ಯಾಲಯಗಳು

ಅಸಿಸ್ಟೆಂಟ್ ಡೈರೆಕ್ಟರ್ ಬೆಂಗಳೂರು, ಮೈಸೂರು ಜಿಲ್ಲೆಗಳನ್ನು ಬಿಟ್ಟು ಉಳಿದೆಲ್ಲ ಜಿಲ್ಲೆಗಳಲ್ಲೂ ಜಿಲ್ಲೆಗೆ ಒಬ್ಬೊಬ್ಬರಂತೆ	17

ಜಾಗೃತ ಕೇಂದ್ರಗಳು (2)

1. ವೆಟರ್‌ನರಿ ಅಸಿಸ್ಟೆಂಟ್ ಸರ್ಜನ್ ಮೈಸೂರು, ಕೋಲಾರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಒಬ್ಬೊಬ್ಬರು 3
2. ವೆಟರ್‌ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ 30

ಪ್ರತಿಬಂಧಕ ಕೇಂದ್ರಗಳು (4)

1. ವೆಟರ್‌ನರಿ ಅಸಿಸ್ಟೆಂಟ್ ಸರ್ಜನ್ ಪ್ರತಿಯೊಂದು ಜಿಲ್ಲೆಗಳಲ್ಲಿ ಒಬ್ಬೊಬ್ಬರಂತೆ ದಕ್ಷಿಣ ಕನ್ನಡ, ತುಮಕೂರು ಬಳ್ಳಾರಿಮತ್ತು ವಿಜಾಪುರ ಜಿಲ್ಲೆಗಳಲ್ಲಿ 4
2. ವೆಟರ್‌ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ 12

II ಕೇಂದ್ರ ಸರ್ಕಾರದ ಯೋಜನೆ

ಜಾಗೃತ ಕೇಂದ್ರಗಳು (6)

ಬೀದರ್, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ, ಬೆಂಗಳೂರು, ಕೊಡಗು ಜಿಲ್ಲೆಗಳಲ್ಲಿ ಒಂದೊಂದರಂತೆ.

1. ಅಸಿಸ್ಟೆಂಟ್ ಡೈರೆಕ್ಟರ್ 6
2. ವೆಟರ್‌ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ 60

ಪ್ರತಿಬಂಧಕ ಕೇಂದ್ರ (1)

ಬೆಳಗಾವಿ ಜಿಲ್ಲೆಯ ಕಾಗವಾಡ್‌ದಲ್ಲಿದೆ.

1. ಅಸಿಸ್ಟೆಂಟ್ ಡೈರೆಕ್ಟರ್ 1
2. ವೆಟರ್‌ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ 3

ರಾಜ್ಯದಲ್ಲಿ ಬೇರೆಬೇರೆ ವರ್ಷಗಳಲ್ಲಿ ಕಾಣಿಸಿಕೊಂಡಿರುವ ದೊಡ್ಡರೋಗದ ಉದ್ರೇಕಗಳ ಹೋಲಿಕೆಯ ಪಟ್ಟಿಯನ್ನು, ದೊಡ್ಡರೋಗ ನಿವಾರಣಾ ಯೋಜನೆಯಲ್ಲಿ ಕೈಗೊಂಡಿರುವ ವ್ಯಾಕ್ಸಿನೇಶನ್‌ಗಳ ಸಂಖ್ಯೆಯನ್ನು ಮುಂದಿನ ಪುಟದಲ್ಲಿ ಕೊಟ್ಟಿದೆ.

ಕೋಷ್ಟಕ 1. ವರ್ಷಾವಾರು ದೊಡ್ಡರೋಗೋದ್ರೇಕಗಳು, ಅದರ ಪರಿಣಾಮ ಹಾಗೂ ವ್ಯಾಕ್ಸಿನೇಷನ್ ನಡೆಸಿದ ಸೂಚಿ.

ವರ್ಷ	ರೋಗೋದ್ರೇಕಗಳ ಸಂಖ್ಯೆ	ರೋಗಕ್ಕೆ ಗುರಿಯಾದ ಪ್ರಾಣಿಗಳ ಸಂಖ್ಯೆ	ಸತ್ತ ಪ್ರಾಣಿಗಳ ಸಂಖ್ಯೆ	ವ್ಯಾಕ್ಸಿನೇಷನ್ ಮಾಡಿಸಿದ ಪ್ರಾಣಿಗಳ ಸಂಖ್ಯೆ
1955–56	–	–	–	919202
1956–57	–	–	–	301902
1957–58	–	–	–	668902
1958–59	–	–	–	–
1959–60	–	–	–	–
1960–61	–	–	–	–
1961–62	–	–	–	–
1962–63	–	–	–	–
1963–64	33	1225	1211	–
1964–65	1	34	34	80193
1965–66	–	–	–	191891
1966–67	1	36	23	–
1967–68	1	2	2	773408
1968–69	3	437	437	1969895
1969–70	1	10	10	2484620
1970–71	–	–	–	2120982
1971–72	38	349	200	1880751
1972–73	16	5220	4230	1766517
1973–74	53	1929	1091	2106202
1974–75	62	385	203	1557937
1975–76	20	225	131	2634827
1976–77 (1976 ಡಿಸೆಂಬರ್ ಕೊನೆಯವರೆಗೆ)	16	2700	2369	1810706

ದೊಡ್ಡರೋಗ ನಿವಾರಣಾ ಯೋಜನೆಯು ಕಾರ್ಯರೂಪಕ್ಕೆ ಬಂದನಂತರ ರೋಗೋದ್ರೇಕಗಳು ಬಹಳಮಟ್ಟಿಗೆ ಕಡಿಮೆಯಾದವು. ಈ ಹಿಂದೆ ಒಮ್ಮೆ ಕಾಣಿಸಿಕೊಂಡರೆ ಅನೇಕ ದನಗಳನ್ನು ಆಹುತಿ ತೆಗೆದುಕೊಳ್ಳುತ್ತಿದ್ದ ದೊಡ್ಡರೋಗವು, ಈ ಯೋಜನೆಯ ಕಾರ್ಯ ಚಟುವಟಿಕೆಯಿಂದ ಇಂದು ಹಿಂದಿನಸ್ಥಿತಿ ಬರದು ಕಲ್ಪನೆ ಎನ್ನುವಷ್ಟರ ಮಟ್ಟಿಗೆ ಕಡಿಮೆಯಾಗಿದೆ. ಆದರೂ ಅಲ್ಲಲ್ಲಿ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಲೇ ಇದೆ. ಅದರಲ್ಲೂ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮಾತ್ರ ಮೇಲಿಂದಮೇಲೆ ಕಾಣಿಸಿಕೊಳ್ಳುತ್ತಿದೆ. ಇಲ್ಲಿ ಮಿಶ್ರತಳಿಗಳು ಹೆಚ್ಚಾಗಿ ಕೇಂದ್ರೀಕೃತವಾಗಿರುವುದೂ ಬೇರೆಡೆಯಿಂದ ಹೊಸಹೊಸ ಹಸುಗಳು ಬರುತ್ತಿರುವುದೂ ಇದಕ್ಕೆ ಕಾರಣವಾಗಿದೆ. ಇಲ್ಲಿ ನಡೆಯುವ ಒಳ್ಳೆಯ ಮಿಶ್ರತಳಿ ಹಸುಗಳ ಮಾರಾಟ, ಸಾಗಾಟ, ವ್ಯಾಪಾರಗಳು ಇಲ್ಲಿ ಹಾಗೂ ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ರೋಗೋದ್ರೇಕಗಳಿಗೆ ಕಾರಣವಾಗಿವೆ.

ದೊಡ್ಡರೋಗ ನಿವಾರಣಾ ಯೋಜನೆಯ ಮುಂದಿನ ಕಾರ್ಯಕ್ರಮಗಳು

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರಸರ್ಕಾರದ ಹೊಣೆಗಾರಿಕೆಯಲ್ಲಿ ಇನ್ನೂ ಮೂರು ದೊಡ್ಡರೋಗ ಪ್ರತಿಬಂಧಕ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಅದಕ್ಕಾಗಿ ಪರಿಗಣನೆಗಾಗಿ ಈ ಬಗ್ಗೆ ಸೂಚನೆಗಳನ್ನು ಪಶುಸಂಗೋಪನೆ ಮತ್ತು ಪಶುವೈದ್ಯಸೇವೆ ಇಲಾಖೆಯ ನಿರ್ದೇಶಕರಿಗೆ ಕಳುಹಿಸಿಕೊಡಲಾಗಿದೆ. ಆ ಮೂರು ಪ್ರತಿಬಂಧಕ ಕೇಂದ್ರಗಳಲ್ಲಿ ಎರಡನ್ನು ಕೋಲಾರ ಜಿಲ್ಲೆಯ ಚಿಂಚರನ ಹಳ್ಳಿ ಮತ್ತು ಕುಡುಮಲಗಳಲ್ಲಿಯೂ, ಮತ್ತೊಂದನ್ನು ಮೈಸೂರು ಜಿಲ್ಲೆಯ ಹುಂಗನದಲ್ಲಿಯೂ ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಕೇಂದ್ರಗಳನ್ನು 1-10-77 ರಿಂದ ತೆರೆಯಲು ನಿರ್ಧರಿಸಿದೆ.

ಪಶುಪಾಲಕರಿಗೆ ಸೂಚನೆಗಳು

1. ದೊಡ್ಡರೋಗ ಅತಿ ಸಾಂಕ್ರಾಮಿಕರೋಗ.
2. ತಮ್ಮ ಪ್ರಾಣಿಗಳಿಗೆ ಮಾತ್ರವೇ ಅಲ್ಲದೆ ಅಕ್ಕಪಕ್ಕದವರ ಅಥವಾ ನೆರೆ ಊರಿನಲ್ಲಿ ದನಗಳಿಗೆ ದೊಡ್ಡರೋಗ ಬಂದಿರುವುದು ತಿಳಿದ ಕೂಡಲೇ ಪಶುವೈದ್ಯಾಧಿಕಾರಿಗಳಿಗೆ ತಿಳಿಸಬೇಕು.
3. ದೊಡ್ಡರೋಗದ ಲಕ್ಷಣಗಳ ಬಗ್ಗೆ ಗಮನಿಸಬೇಕು.
4. ರೋಗಗ್ರಸ್ತ ಹಾಗೂ ಸಂಶಯಾತ್ಮಕ ದನಗಳನ್ನು ಆರೋಗ್ಯಕರ ಪ್ರಾಣಿಗಳಿಂದ ಕೂಡಲೇ ಬೇರ್ಪಡಿಸಿ ಪಶುವೈದ್ಯರಿಗೆ ತೋರಿಸಬೇಕು.

5. ದೊಡ್ಡರೋಗ ತಲೆದೋರಿದ ಸ್ಥಳಗಳಿಂದ ದನಗಳನ್ನು ಅಥವಾ ಹುಲ್ಲು ಮುಂತಾದವುಗಳನ್ನು ತರುವುದಾಗಲಿ, ಇಲ್ಲವೇ ಅಂತಹ ಸ್ಥಳಗಳಿಗೆ ದನಗಳನ್ನು ಕೊಂಡೊಯ್ಯುವುದಾಗಲಿ ಅಪಾಯಕರ.

6. ದನಗಳಿಗೆ ದೊಡ್ಡರೋಗದ ವಿರುದ್ಧ ವ್ಯಾಕ್ಸಿನೇಷನ್ ಮಾಡಿಸಬೇಕು.

7. ದನಗಳಿಗೆ ವ್ಯಾಕ್ಸಿನೇಷನ್ ಮಾಡಲು ಬರುವ ಸಿಬ್ಬಂದಿಯೊಂದಿಗೆ ಸಹಕರಿಸಬೇಕು.

8. ಹಸುಗಳಿಗೆ ವ್ಯಾಕ್ಸಿನೇಷನ್ ಮಾಡಿಸುವುದರಿಂದ ಅವುಗಳಲ್ಲಿ ಹಾಲುತ್ಪಾದನೆ ಕಡಿಮೆಯಾಗುವುದೆಂದಾಗಲಿ ಅಥವಾ ತೊಂದರೆಗಳುಂಟಾಗುವುದೆಂದಾಗಲಿ ಹೆದರುವುದು ಬೇಡ. ಇವು ಕೇವಲ ತಾತ್ಕಾಲಿಕ. ಪುನಃ ಸರಿಹೋಗುತ್ತದೆ. ಹಾಗೆಂದು ಹಸುಗಳಿಗೆ ವ್ಯಾಕ್ಸಿನೇಷನ್ ಮಾಡಿಸದೇ ಇರುವುದರಿಂದ ಪ್ರಾಣಿಯ ಜೀವಕ್ಕೆ ಅಪಾಯವಾಗುವುದರ ಜೊತೆಗೆ ಇತರ ಹಸುಗಳಿಗೂ ಸೋಂಕು ಹರಡಿ ಮತ್ತಷ್ಟು ನಷ್ಟವಾಗುವುದು.

9. ಹಸುಗಳನ್ನು ಇತರ ಸ್ಥಳಗಳಿಂದ ಕೊಂಡು ತರುವಾಗ ಅವುಗಳಿಗೆ ದೊಡ್ಡರೋಗದ ವ್ಯಾಕ್ಸಿನೇಷನ್ ಮಾಡಿದೆಯೇ, ಮಾಡಿದ್ದರೆ ಯಾವಾಗ ಎಂಬ ಮಾಹಿತಿಯನ್ನು ಪಡೆಯಬೇಕು. ಇಲ್ಲವೇ ನಾಡಿನ ಪಶುವೈದ್ಯರಿಂದ ಅಧಿಕೃತ ಪತ್ರ ಪಡೆಯಬೇಕು.

10. ದೊಡ್ಡರೋಗದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಮೀಪದ ಪಶುವೈದ್ಯಾಧಿಕಾರಿಗಳಿಂದ ಪಡೆಯಬಹುದು.

ಆಧಾರ ಗ್ರಂಥಗಳು

1. Barton, A. (1956) *Plagues and Contagious in antiquity*. J. Am. Vet. Med. Ass., 129 : 503–5.

2. Blood, D. C. and J. A. Henderson., *Veterinary Medicine* Fourth Edn, The Williams and Wilkins Company, Baltimore, U.S.A : 1974.

3. Nilakantan, P. R. (1970) *Rinderpest Eradication in India*. Indian Vet. J. 47 : 921–931.

4. Maurer, F.D. (1962), *Rinderpest*, J. Am. Vet. Med. Ass. 141 : 712-716.

5. Scott, G. R. (1964) *Rinderpest Advances in Veterinary Science* Vol. 9, Edited by Bandly C.A. and E.L. Jungherr, Academic Press, New York 1964.

6. Scott, G. R. 1964, *Infectious Diseases* of wild animals. Edited by Davis J. W., Karsted, L. H., Trainer. D. O. First Edn., The IOWA State University Press, Ames, IOWA, USA : 1970.

7. Polding, J. B., Simpson, R. M., Scott, G. R.(1959) *Links Between Canine Distemper and Rinderpest*. Vet. Rec. 71: 643.

8. Scott, G. R., Detroy, D. E. and G. White (1962) *Rinderpest in Pigs of European origin*, Am. J. Vet. Res. 23: 452.

9. Hornby, H. E. (1926) *Studies in Rinderpest immunity : Methods of Infection*. Vet. J. 82 : 348.

10. Cornel, A. B. (1958), *Epidemiology of the recent Rinderpest infection in the Philippines*. Philipp. J. Anim. Ind. 17, 113-131 cited in Vet. Bull. 1959 29 : 2450.

11. Ademollo, A (1958) *The danger of spread of Rinderpest by meat imported from infected Countries.* Vet. ital 9 : 130-138 cited in Vet. Bull. 1959, 29 : 1403.

12. Smith, H. M., Jones., J. C. *Veterinary Pathology.* Lea and Febiger, philadelphia, U.S.A : 1961.

13. Joint O.I.E-FAO, Consultative meeting on Rinderpest in the Near East, Paris, 26, May 1970, Bull off Int. Epizoot, 73, 817-832 (F) and 833-847 (E).

14. Emergence meeting of Rinderpest organised by the FAO. Regional Animal Production and Health Commission for the Near East., Beirut (Lebanon), 12-13 Oct, 1970, Bull off int Epizoot 73, 849-872 (F) and 873-893(E) cited in Vet. Bull, 1971, 41 : 6247, 6248.

ಪಾರಿಭಾಷಿಕ ಶಬ್ದಕೋಶ

ಅಡ್ಡ ಕೊಯ್ತ	Cross section
ಅನುತೀವ್ರ	Subacute
ಅನುಗೊಳಿಸು	Adeptation
ಆಧಾರಸ್ತರ	Basal layer
ಅಂಗುಳು	Hard Palate
ಈಲಿ	Liver
ಊತಕ	Tissue
ಊತಕ ಆಧಾರಸ್ತರ	Lamina Proporia
ಊತಕ ಸಂವರ್ಧನ	Tissue culture
ವ್ಯಾಕ್ಸೀನ್(ಲಸಿಕೆ)	vaccine
ಒಣ ಮುಸುಡಿ	Dry mussle
ಒಸಡು	Gum
ಕಪೋಲ(ದವಡೆ) ಸಂಯೋಜಕ ಸಂದು	Cheek commissure
ಕರುಳು ಜಠರರಿತ	Enterogastrilis
ಕಾಲುಬಾಯಿರೋಗ	Foot and mouth disease
ಕೆಳದವಡೆ	Submaxillary
ಕೋಶಿಕ(ಊತಕ) ನಾಶ	Necrosis
ಗಳಲೆರೋಗ	Haemorrhagic septicaemia
ಗಾಯ	Lesion
ಗುದನಾಳ	Rectum
ಗೆರಸಲುರೋಗ	Foot and mouth disease
ಗಂಟಲ ಕುಹರ	Pharynx
ಚಡಪಡಿಕೆ	Restlessness
ಚರ್ಮದದ್ದು	Skin eruption
ಚಿಕಿತ್ಸೆ	Treatment
ಜ್ವರ	Fever
ಜೀರ್ಣನಾಳ	Digestive tract
ತದ್ದು ಚೀಲ	Scrotum
ತನೂಕರಿತ (ದುರ್ಬಲೀಕರಿಸಿದ)	Attenuated
ನವಿಜಾರ್ಣಲೋಳ್ಪರೆ	Reticulo endothelial
ದಡಾರ	Measles
ದೊಡ್ಡರೋಗ	Rinderpest
ನಿಷ್ಪ್ರಾಣ	Prostration
ನಿರುತ್ಸಾಹ (ಮಾಂದ್ಯತೆ)	Depression
ನಿರೋಧನಾಶಕ್ತಿ	Ressistance
ನಿಷ್ಕ್ರಿಯಾಮಕಾರಕ ಪರೀಕ್ಷೆ	control serum neutralisation test
ನೀರ್ಗುಳ್ಳೆ	Vesicle
ನೀರ್ಗುಳ್ಳೆ ಬಾಯಿಹುಣ್ಣು	Vesicular stomatitis
ಪರಿಗಲಿತ(ನಷ್ಟ)	Necrotic
ಪರಿಗಲನೆ	Necrosis
ಪ್ರಾಣಿಶವ	Carcass
ಪ್ರತಿಜನಕ	Antigen
ಪ್ರತಿಜೀವ ವಸ್ತು	Antibody
ಪ್ರತಿಜೀವಕ	Antibiotic
ಪೂರಕ ಬಂಧನ	Compliment fixation
ಪ್ಲೀಹ	Spleen
ಪೇಯರಿನ ಮಚ್ಚೆ	Payer's patch
ಬಾಯಿಗೂಡು	Buccal cavity
ಬಾಯಿಹುಣ್ಣು	Stomatitis
ಬಿರುಸಿನ ಬೇಧಿ	Shooting diarrhoea
ಬಿಂದುರೂಪ	Focal form
ಬೆಳಕಿನಂಜಿಕೆ	Photophobia

ಭಗ	Valva
ಮಲಬದ್ಧತೆ	Constipation
ಮಿದುಳುರಿತ	Encephalitis
ಮುಂಡಿಗರುಳು	Ileum
ಮುಂಡಿಗರುಳಿನ ಕವಾಟ	Ileocaecal Valve
ಮೂಗರುಳು-ದೊಗ್ಗರುಳು	Caeco-calic
ಸಂಗಮ	Junction
ಮೆಂಡಿಕೆ	Tonsil
ಮೃತಾಂಗಾಂಶ	Necrotic
ಯೋನಿ	Vagina
ರಕ್ತಾಧಿಕ್ಯತೆ (ರಕ್ತತುಂಬಿದ, ರಕ್ತಸೇರಿದ)	Congestion
ರಕ್ತಸಾರ	Serum
ರಕ್ತಸಾರದ	Serological
ರಕ್ತಸ್ರಾವ	Haemorrhage
ರಕ್ತರಸ	Plasma
ರೋಗನಿದಾನ	Diagnosis
ರೋಗನಿಯಂತ್ರಣ	Disease control
ರೋಗಪರಿಪಾಕಾವಸ್ಥೆ	Incubation
ರೋಗಪ್ರತಿರಕ್ಷತೆ	Immunity
ರೋಗಪ್ರತಿರೋಧ ರಕ್ಷಿತವಲ್ಲಿ	Immane barrier zone
ರೋಗಪ್ರತಿರೋಧ ವೃತ್ತ	Immune belt
ರೋಗವಿಕೃತಿ	Lesion
ರೋಗವ್ಯಾಪನೆ	Morbidity
ರೋಗೋದ್ರೇಕ	Out break
ರೋಮಂಥ ಪ್ರಾಣಿ	Ruminent
ಲಸಿಕೆ ಹಾಕಣೆ	Viccination
ಲೋಳ್ಪರೆ	Mucus membrone
ಲೋಮನಾಳ	Capillary
ವ್ರಣ	Wleer
ವಿದ್ಯುದ್ವಿಶ್ಲೇಷ್ಯ	Electrolyte
ವಿಪಕ್ಷರಕ್ಷಣ	Cross protection
ವಿಭೇದ	Strain
ವಿಭೇದಾತ್ಮಕ ರೋಗ ನಿದಾನ	Differential diagnosis
ವಿಲೇವಾರಿ	Disposal
ವಿಷಾಣು	Virus
ವಿಷಾಣುರಕ್ತತೆ	Viraemia
ವಿಸರ್ಜನೆ	Excretion
ವೃಷಣಕೋಶ	Scratum
ಸಿರ	Vein
ಸಿರನಾಳ	Intravenous
ಸವೆತಗಾಯ	Erosion
ಸ್ತರ	Layer
ಸಾಮೂಹಿಕವಧೆ	Mass slaughter
ಸಾವುದರ	Mortality rate
ಸ್ರಾವ	Secretion
ಸಾಂಕ್ರಾಮಿಕ (ವ್ಯಾಪಕ) ವ್ಯಾಧಿ	Epozootic
ಸ್ಥಾನಿಕ ವ್ಯಾಧಿ	Enzootic
ಸಾಂಸರ್ಗಿಕ	Contagious
ಸೂಕ್ಷ್ಮಸಂವೇದಿ	Sensitive
ಸೀಳು	Cleft
ಸ್ಥಿರರೋಗ ಪ್ರತಿರಕ್ಷತೆ	Permanent immunity
ಸೋಂಕು	Infection
ಸೋಂಕುನಾಶಕ	Disinfectant
ಸೌಮ್ಯ	Mild

ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಪುಸ್ತಕಗಳು

ಈ ಪುಸ್ತಕಗಳಿಗಾಗಿ ಮೆ. ಇಂಡಿಯಾ ಬುಕ್ ಹೌಸ್, 5ನೇ ಮೈನ್,
ಗಾಂಧಿನಗರ ಬೆಂಗಳೂರು–560009. ಇವರನ್ನು ಸಂಪರ್ಕಿಸಿ.

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	2-00
2.	ಪೀಡೆ ನಿರ್ವಹಣೆ	(")	5-00
3.	ಕೀಟ ವಿಂಗಡಣೆ		15-00
4.	ಕೀಟ ಪಕ್ಷೋಟಿ	(ದ್ವಿತೀಯ ಮುದ್ರಣ)	12-50
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ—ಭಾಗ 1		6-25
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)	12-50
7.	ಕೃಷಿ ರಸಾಯನಶಾಸ್ತ್ರಶಬ್ದಾರ್ಥ ನಿರೂಪಣಾವಳಿ	(ಸಾದಾ ಪ್ರತಿ)	5-00
		(ಕ್ಯಾಲಿಕೊ ಪ್ರತಿ)	6-25
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	19-00
9.	ರೈತರ ನೆಚ್ಚು ಮೆಚ್ಚಿನ ಮರಗಳು	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	19-00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ–ಭಾಗ 2	(ಸಾದಾ ಪ್ರತಿ)	11-25
		(ಕ್ಯಾಲಿಕೊ ಪ್ರತಿ)	15-00
11.	ಬೀಜಗಣಿತ ಪರಿಚಯ	(ಅಚ್ಚಿನಲ್ಲಿದೆ)	
12.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	19-00
13.	ಮಣ್ಣು	(ಸಾದಾ ಪ್ರತಿ)	11-25
		(ಕ್ಯಾಲಿಕೊ ಪ್ರತಿ)	15-00
14.	ಕೃಷಿ ಸಹಕಾರ	(ಸಾದಾ ಪ್ರತಿ)	6-25
		(ಕ್ಯಾಲಿಕೊ ಪ್ರತಿ)	10-00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾ ಪ್ರತಿ)	15-00
		(ಕ್ಯಾಲಿಕೊ ಪ್ರತಿ)	19-00
16.	ಗೋಸಂಪತ್ತು	(ಸಾದಾ ಪ್ರತಿ)	6-25
		(ಕ್ಯಾಲಿಕೊ ಪ್ರತಿ)	10-00

17. ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾ ಪ್ರತಿ)	7-50
	ಕ್ಯಾಲಿಕೊ ಪ್ರತಿ	11-25
18. ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾ ಪ್ರತಿ)	17-50
	(ಕ್ಯಾಲಿಕೊ ಪ್ರತಿ)	21-25
19. ಪಶುವೈದ್ಯಕೀಯ ವಿಜ್ಞಾನ	(ಸಾದಾ ಪ್ರತಿ)	7-50
	(ಕ್ಯಾಲಿಕೊ ಪ್ರತಿ)	11-25
20. ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	(ಸಾದಾ ಪ್ರತಿ)	8-25
	(ಕ್ಯಾಲಿಕೊ ಪ್ರತಿ)	12-00
21. ಟ್ರ್ಯಾಕ್ಟರುಗಳು ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	(ಸಾದಾ ಪ್ರತಿ)	7-50
	(ಕ್ಯಾಲಿಕೊ ಪ್ರತಿ)	12-50
22. ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ–3	(ಸಾದಾ ಪ್ರತಿ)	10-00
	(ಕ್ಯಾಲಿಕೊ ಪ್ರತಿ)	15-00
23. ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾ ಪ್ರತಿ)	11-25
	(ಕ್ಯಾಲಿಕೊ ಪ್ರತಿ)	16-25
24. ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	(ಸಾದಾ ಪ್ರತಿ)	15-00
	(ಕ್ಯಾಲಿಕೊ ಪ್ರತಿ)	19-00
25. ಸಸ್ಯವರ್ಗೀಕರಣ ಶಾಸ್ತ್ರ	(ಸಾದಾ ಪ್ರತಿ)	15-00
	(ಕ್ಯಾಲಿಕೊ ಪ್ರತಿ)	20-00
26. ಪೌಷ್ಟಿಕ ಆಹಾರ	(ಸಾದಾ ಪ್ರತಿ)	9-00
	(ಕ್ಯಾಲಿಕೊ ಪ್ರತಿ)	14-00
27. ಕಡಲ ಮೀನುಗಾರಿಕೆ	(ಸಾದಾ ಪ್ರತಿ)	5-00
	(ಕ್ಯಾಲಿಕೊ ಪ್ರತಿ)	10-00
28. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-75
29. ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4-50
30. ಶಿಶುವಿಹಾರ	(ಸಾದಾ ಪ್ರತಿ)	9-50
	(ಕ್ಯಾಲಿಕೊ ಪ್ರತಿ)	13-25
31. ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾ ಪ್ರತಿ)	7-50

32. ಕೃಷಿ ಎಂಜಿನಿಯರಿಂಗ್ ಸಹ- ಪುಸ್ತಕ ಸಮೀಕ್ಷೆ	(ಸಾದಾ ಪ್ರತಿ)	9-50
	(ಕ್ಯಾಲಿಕೊ ಪ್ರತಿ)	14-00
33. ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾ ಪ್ರತಿ)	9-50
	(ಕ್ಯಾಲಿಕೊ ಪ್ರತಿ)	13-25
34. ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12-50
35. ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		16-25
36. 'ಕ್ಯಾಸಿಂಗ್' ಆಹಾರ ಜೋಪಾಸನೆಯ ಒಂದು	(ಸಾದಾ ಪ್ರತಿ)	16-25
ಆಧುನಿಕ ವಿಧಾನ	(ಕ್ಯಾಲಿಕೊ ಪ್ರತಿ)	21-25
37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-75
38. ಜೀವಕೋಶ ಕ್ರಿಯಾಶಾಸ್ತ್ರ ಮತ್ತು	(ಸಾದಾ ಪ್ರತಿ)	20-00
[illegible] ರಸಾಯನಶಾಸ್ತ್ರ	(ಕ್ಯಾಲಿಕೊ ಪ್ರತಿ)	25-00
39. ಎಲುಬು ಶಾಸ್ತ್ರ	(ಸಾದಾ ಪ್ರತಿ)	11-25
	(ಕ್ಯಾಲಿಕೊ ಪ್ರತಿ)	16-25
40. ಕಡಲೆಕಾಯಿ(ಶೇಂಗಾ)	(ಸಾದಾ ಪ್ರತಿ)	10-00
	(ಕ್ಯಾಲಿಕೊ ಪ್ರತಿ)	15-00
41. ಗಣಿತಶಾಸ್ತ್ರ ಪ್ರವೇಶಿಕೆ ಭಾಗ-1	(ಸಾದಾ ಪ್ರತಿ)	25-00
	(ಕ್ಯಾಲಿಕೊ ಪ್ರತಿ)	30-00
42. ಗಣಿತಶಾಸ್ತ್ರ ಪ್ರವೇಶಿಕೆ ಭಾಗ-2	(ಸಾದಾ ಪ್ರತಿ)	20-00
	(ಕ್ಯಾಲಿಕೊ ಪ್ರತಿ)	25-00
43. ತೆಂಗು, ಅಡಿಕೆ ಇತರ ಗಿಡಮರಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		9-00
44. ಪ್ಲಾಂಟೇಷನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		12-00
45. ಭಾರತದಲ್ಲಿ ಕೋಳಿಸಾಕಣೆ	(ಸಾದಾ ಪ್ರತಿ)	22-50
	(ಕ್ಯಾಲಿಕೊ ಪ್ರತಿ)	27-50
46. ಕಲ್ಲುನಾರು(ಭೂತಾಳೆ) ಗಿಡಗಳು	(ಸಾದಾ ಪ್ರತಿ)	5-00
47. ಎಣ್ಣೆಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		7-50

48. ಹತ್ತಿ(ನೂಲು) ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ	(ಸಾದಾಪ್ರತಿ)	10-00
49. ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ	(ಸಾದಾ ಪ್ರತಿ)	8-25
	(ಕ್ಯಾಲಿಕೊ ಪ್ರತಿ)	13-23
50. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	(ಸಾದಾ ಪ್ರತಿ)	7-50
	(ಕ್ಯಾಲಿಕೊ ಪ್ರತಿ)	12-50
51. ಪಶುರೋಗಗಳು ಮತ್ತು ಸಾರ್ವಜನಿಕ ಆರೋಗ್ಯ	(ಸಾದಾ ಪ್ರತಿ)	12-50
	(ಕ್ಯಾಲಿಕೊ ಪ್ರತಿ)	17-50
52. ಮೀನುಗಾರಿಕೆ	(ಸಾದಾ ಪ್ರತಿ)	10-00
	(ಕ್ಯಾಲಿಕೊ ಪ್ರತಿ)	15-00
53. ಹಸುರೆಲೆಗೊಬ್ಬರ, ಮೇವು ಹಾಗೂ ಉಪ್ಪುನೀರಳಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		5-00
54. ಮಾದಕ(ಹೊಗೆಸೊಪ್ಪು, ಗಾಂಜ) ಹಾಗೂ ಸಾಂಬಾರ (ಅರಿಶಿನ ಇತ್ಯಾದಿ) ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3-75
55. ಕೃಷಿ ಉಪಯೋಗಿ ವೃಕ್ಷಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		4-50
56. ಸಸ್ಯ ಸಾಮ್ರಾಜ್ಯ	(ಸಾದಾ ಪ್ರತಿ)	25-00
	(ಕ್ಯಾಲಿಕೊ ಪ್ರತಿ)	30-00
57. ಭಾರತದಲ್ಲಿ ಜೇನು ಸಾಕಣೆ	(ಸಾದಾ ಪ್ರತಿ)	20.00
	(ಕ್ಯಾಲಿಕೊ ಪ್ರತಿ)	25.00
58. ಮೂಲ ಅರ್ಥಶಾಸ್ತ್ರ	(ಸಾದಾ ಪ್ರತಿ)	19-00
	(ಕ್ಯಾಲಿಕೊ ಪ್ರತಿ)	24-00
59. ಜೇನು ಸಾಕಣೆ	(ಸಾದಾ ಪ್ರತಿ)	17-50
	(ಕ್ಯಾಲಿಕೊ ಪ್ರತಿ)	22-50
60. ಕೃಷಿ ರಸಾಯನ ಶಾಸ್ತ್ರ ಪಾರಿಭಾಷಿಕ ಶಬ್ದಕೋಶ		3.25
61. ತರಕಾರಿ ಬೆಳೆಗಳ ಕೀಟನಿಯಂತ್ರಣ	(ಸಾದಾ ಪ್ರತಿ)	12-50
	(ಕ್ಯಾಲಿಕೊ ಪ್ರತಿ)	19-00
62. ಬೆಳೆ ಕೀಟಗಳು ಹಾಗೂ ಅವುಗಳ ಹತೋಟಿ	(ಕ್ಯಾಲಿಕೊ ಪ್ರತಿ)	125-00

63. ಮಣ್ಣು ನಿರ್ವಹಣೆ, ಸಂರಕ್ಷಣೆ, ಬೆಳೆಉತ್ಪಾದನೆ (ಅಚ್ಚಿನಲ್ಲಿದೆ)
64. ಸಂಸ್ಕೃತಿಯ ರೂಪಿಕೆಗಳು „
65. ಹುಲಿ-ಭಾರತದ ರಾಷ್ಟ್ರೀಯ ಮೃಗ „
66. ಸಹಕಾರಿ ಬೇಸಾಯ „
67. ಕೋದ „
68. ಮಣ್ಣು ಶಿಲೀಂಧ್ರಗಳ ಕೈಪಿಡಿ „
69. ನಿರಾವರಿ ತತ್ವ ಹಾಗೂ ಪದ್ಧತಿಗಳು „
70. ದೊಡ್ಡರೋಗ „
71. ಸಾಕುಪ್ರಾಣಿಗಳ ಭ್ರೂಣಶಾಸ್ತ್ರ „
72. ಸಾವಯವ ರಸಾಯನಶಾಸ್ತ್ರ „
73. ರೇಖಾತ್ಮಕ ಬೀಜಗಣಿತ „
74. ಕೃಷಿ ಅನಿಲಯಂತ್ರ ಹಾಗೂ ಟ್ರ್ಯಾಕ್ಟರು „
75. ಪ್ರಾಣಿಗಳ ವರ್ತನೆ „
76. ಸಸ್ಯ ತಳಿ ಅಭಿವೃದ್ಧಿ ವಿಧಾನಗಳು „
77. ಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ „
78. ಆಹಾರ ಸೂಕ್ಷ್ಮಜೀವಿ ವಿಜ್ಞಾನ ಭಾಗ-1 „
79. ಕೆಲವು ಸಸ್ಯಗಳ ವೈಜ್ಞಾನಿಕ ಇಂಗ್ಲಿಷ್ ಹಾಗೂ ಕನ್ನಡ ಹೆಸರುಗಳು „
80. ಮೀನು ಮತ್ತು ಇತರ ಸಾಗರೋತ್ಪನ್ನ ಆಹಾರಗಳ ಶೀತಜೋಪಾಸನೆ „
81. ಕೀಲು ಮತ್ತು ಸ್ನಾಯು ಶಾಸ್ತ್ರ „